ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದ ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಸಮಾಜಶಾಸ್ತ್ರ ವಿಷಯದಲ್ಲಿ ಪಿ. ಹೆಚ್. ಡಿ ಪದವಿಗಾಗಿ
ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧದ
ಸಾರಲೇಖ

ಸಂಶೋಧಕರು

ಪ್ರಭಾಕರ

ಮಾರ್ಗದರ್ಶಕರು

ಡಾ. ಗೋವಿಂದರಾಜು ಬಿ. ಎಂ

ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,

ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – 574199
ಕರ್ನಾಟಕ, ಭಾರತ

2020

<u>ದೃಢೀಕರಣ ಪತ್ರ</u>

ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದ ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ ಎಂಬ ಪಿ.ಹೆಚ್.ಡಿ ಮಹಾಪ್ರಬಂಧವನ್ನು **ಡಾ. ಗೋವಿಂದರಾಜು ಬಿ. ಎಂ,** ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತೇನೆ. ಇದನ್ನು ಈ ಹಿಂದೆ ಯಾವುದೇ ಪದವಿ ಅಥವಾ ಡಿಪ್ಲೋಮಾ ಗಳಿಸಲು ಬೇರೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಅಥವಾ ಇತರ ಸಂಶೋಧನಾ ಸಂಸ್ಥೆಗಳಿಗೆ ಭಾಗಶಃವಾಗಿಯಾಗಲಿ, ಪೂರ್ಣವಾಗಿಯಾಗಲಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಮಂಗಳಗಂಗೋತ್ರಿ

ದಿನಾಂಕ:

ಪ್ರಭಾಕರ
ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ.

<u>ಅಭ್ಯರ್ಥಿಯ ಪ್ರಮಾಣ ಪತ್ರ</u>

ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅರ್ಪಿಸುತ್ತಿರುವ **"ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದ ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ"** ಎಂಬ ಪಿ.ಹೆಚ್.ಡಿ ಮಹಾಪ್ರಬಂಧವನ್ನು **ಪ್ರಭಾಕರ** ಅವರು ನನ್ನ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯಲ್ಲಿ ಸಿದ್ಧಪಡಿಸಿದ್ದಾರೆಂದು ದೃಢೀಕರಿಸುತ್ತೇನೆ. ಈ ಮೊದಲು ಈ ಪಿ.ಹೆಚ್.ಡಿ ಮಹಾಪ್ರಬಂಧವನ್ನು ಭಾಗಶಃವಾಗಿಯಾಗಲಿ, ಪೂರ್ಣವಾಗಿಯಾಗಲಿ ಯಾವುದೇ ಪದವಿ ಅಥವಾ ಡಿಪ್ಲೋಮಾ ಗಳಿಸಲು ಯಾವ ಭಾಷೆಯಲ್ಲೂ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಮಂಗಳಗಂಗೋತ್ರಿ

ದಿನಾಂಕ:

ಡಾ. ಗೋವಿಂದರಾಜು ಬಿ. ಎಂ
ಸಹಾಯಕ ಪ್ರಾಧ್ಯಾಪಕರು
ಸಮಾಜಶಾಸ್ತ್ರ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ.

ಪರಿವಿಡಿ

	ಶೀರ್ಷಿಕೆ	ಪುಟ ಸಂಖ್ಯೆ
	ಅಭ್ಯರ್ಥಿಯ ದೃಢೀಕರಣ ಪತ್ರ	**i**
	ಅಭ್ಯರ್ಥಿಯ ಪ್ರಮಾಣ ಪತ್ರ	**ii**
I	**ಪೀಠಿಕೆ**	**1-7**
II	**ಸಾಹಿತ್ಯ ಪರಮಾರ್ಶೆ**	**8-10**
III	**ಸಂಶೋಧನಾ ವಿಧಾನ**	**11-16**
	3.1–ಅಧ್ಯಯನದ ಉದ್ದೇಶಗಳು	
	3.3–ಸಂಶೋಧನಾ ವ್ಯಾಪ್ತಿ	
	4.4–ಸಂಶೋಧನಾ ವಿಧಾನ ಮತ್ತು ಮಾಹಿತಿ ಸಂಗ್ರಹಣೆ	
	4.5–ಅಧ್ಯಯನದ ಇತಿಮಿತಿಗಳು	
IV	**ಪ್ರಮುಖ ಸಂಶೋಧನಾ ಫಲಿತಾಂಶಗಳು**	**17-41**
	5.2–ಸಾಮಾಜಿಕ–ಆರ್ಥಿಕ ಸ್ಥಿತಿಗತಿ	
	5.3– ಪರವನ್ ಸಮುದಾಯದ ಶೈಕ್ಷಣಿಕ ಸ್ಥಿತಿಗತಿ	
	5.4–ಪರವನ್ ಸಮುದಾಯದ ಆರೋಗ್ಯದ ಸ್ಥಿತಿಗತಿ	
	5.5– ಪರವನ್ ಸಮುದಾಯದವರು ಪಡೆದಿರುವ ಸರ್ಕಾರದ ಸೌಲಭ್ಯಗಳು	
V	**ಉಪಸಂಹಾರ**	**42-45**
	6.1– ಸಂಶೋಧನಾ ಫಲಿತಾಂಶಗಳು	
	6.2– ಸಲಹೆಗಳು	
VI	**ಪರಾಮರ್ಶನ ಗ್ರಂಥಗಳು**	**46-47**

ಪೀಠಿಕೆ

ಭಾರತವು ಒಂದು ವಿಶಾಲವಾದ ಭೌಗೋಳಿಕ ಪ್ರದೇಶವನ್ನೊಳಗೊಂಡಿರುವ ಖಂಡವಾಗಿದೆ, ಹಾಗೂ ವಿಶಾಲವಾದ ಭೂ ಪ್ರದೇಶಕ್ಕೆ ಅನುಗುಣವಾಗಿ ಅತ್ಯಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ದೇಶ ಇದಾಗಿದೆ. ಭಾರತ ದೇಶವು ಪ್ರಪಂಚದಲ್ಲೇ ಅತ್ಯಂತ ಹೆಚ್ಚು ವೈಶಿಷ್ಟತೆಯಿಂದ ಕೂಡಿರುವ ದೇಶವಾಗಿದೆ. ಈ ದೇಶವು ಹಲವು ಭಾಷೆ, ಧರ್ಮ, ಜಾತಿ, ಜನಾಂಗಗಳ ತೊಟ್ಟಿಲು ಮತ್ತು ಬಹುಮುಖಿ ಸಂಸ್ಕೃತಿಯಿಂದ ಕೂಡಿರುವ ವೈವಿಧ್ಯತೆಯ ತವರೂರು ಇದಾಗಿದೆ. ಇದರ ಜೊತೆಗೆ ದಕ್ಷಿಣ ಆಫ್ರಿಕದ ನಂತರ ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ಪ್ರಮಾಣದ ಆದಿವಾಸೀ ಬುಡಕಟ್ಟು ಸಮುದಾಯಗಳನ್ನು ಹೊಂದಿರುವ ಬೀಡು ಎಂಬುದಾಗಿ ಕರೆಯಿಸಿಕೊಂಡಿದೆ. ಒಟ್ಟು ಜನಸಂಖ್ಯೆಯಲ್ಲಿ ಸರಿಸುಮಾರು 8 ಶೇಕಡದಷ್ಟು ಬುಡಕಟ್ಟು ಸಮುದಾಯಗಳು ಇದ್ದರೆ, ಸರಿಸುಮಾರು 20 ಶೇಕಡ ಜನಸಂಖ್ಯೆ ಪರಿಶಿಷ್ಟ ಜಾತಿಗೆ ಸೇರಿರುವ ಸಮುದಾಯಗಳು ಇರುವುದು ಕಂಡು ಬರುತ್ತದೆ. ಇತರ ರಾಷ್ಟ್ರಗಳಲ್ಲಿ ಇರುವ ಹಾಗೆ ಈ ಖಂಡದಲ್ಲಿ ಬಡವ, ಶ್ರೀಮಂತ, ಭೂಮಾಲಿಕ, ಕೂಲಿ ಕಾರ್ಮಿಕ, ಎಂಬೆಲ್ಲಾ ಹಲವಾರು ಗುಂಪುಗಳು ಇದ್ದು, ಜಾತಿ ಪದ್ಧತಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವುದಕ್ಕೆ ಹಲವಾರು ದಾಖಲಾತಿಗಳು ಸಿಗುತ್ತವೆ. ಇದರ ಜೊತೆಗೆ ಸಮಾಜದ ಕೆಳ ಸ್ತರದಲ್ಲಿ ಇರುವಂತ ಜಾತಿ ಸಮುದಾಯಗಳನ್ನು ಅದರಲ್ಲೂ ಪರಿಶಿಷ್ಟ ಜಾತಿ, ಪಂಗಡಗಳ ಸಮುದಾಯದ ಜನರನ್ನು ಜಾತಿ ಪದ್ಧತಿಯ ಆಚರಣೆಯ ಹೆಸರಿನಲ್ಲಿ ಬಗೆ ಬಗೆಯಲ್ಲಿ ಶೋಷಣೆ ಮಾಡಿರುವುದಕ್ಕು ದಾಖಲಾತಿಗಳು ಸಿಗುತ್ತವೆ. ಜಾತಿ ಹೆಸರಿನಲ್ಲಿ ಶೋಷಣೆಗೆ ಒಳಗಾದ ಎಷ್ಟೋ ಜಾತಿ ಸಮುದಾಯಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡು ತಮ್ಮ ಜೀವನೋಪಾಯಕ್ಕೆ ಹಲವು ಬಗೆಯ ಉದ್ಯೋಗಗಳನ್ನು ಅನುಸರಿಸಿಕೊಂಡು ಬರುತ್ತಿರುವುದಕ್ಕೆ ಅನೇಕ ಉದಾಹರಣೆಗಳು ಸಾಕಷ್ಟು ಸಿಗುತ್ತವೆ.

ಜಾತಿ ಉಗಮದ ಬಗ್ಗೆ ಹಲವಾರು ಚಿಂತಕನಕಾರರು ತಮ್ಮ ಸಿದ್ಧಾಂತಗಳ ಮೂಲಕ ತಿಳಿಯಪಡಿಸಿರುವುದನ್ನು ಕಾಣಬಹುದು. ಆ ಎಲ್ಲಾ ಸಿದ್ದಾಂತಗಳಲ್ಲಿ, ದೈವಿಕ ಸಿದ್ದಾಂತವು ಜಾತಿ ಹೇಗೆ ಉಗಮಗೊಂಡಿತು, ಇದರಿಂದ

ಜಾತಿಯಾದಾರಿತ ಉದ್ಯೋಗಗಳು ಹೇಗೆ ಹುಟ್ಟಿಕೊಂಡವು ಎಂಬುದರ ಬಗ್ಗೆ ಬಹಳ ಸ್ಪಷ್ಟವಾಗಿ ತಿಳಿಯಪಡಿಸಿರುವಂತದ್ದನ್ನು ಸಮಾಜಶಾಸ್ತ್ರದ ಅಧ್ಯಯನದಲ್ಲಿ ಕಾಣಬಹುದು. ದೈವಿಕ ಸಿದ್ದಾಂತದವನ್ನು ಇಂದಿಗೂ ಭಾರತ ದೇಶದ ಜನರು ಅದರಲ್ಲೂ ಮೇಲು ಜಾತಿಯ ಜನರು ಸಾವಿರಾರು ವರ್ಷಗಳ ಕಾಲ ಚಾಚು ತಪ್ಪದೇ ಪಾಲಿಸಿಕೊಂಡು ಬಂದಿರುವುದಕ್ಕೂ ಬಹಳಷ್ಟು ದಾಖಲಾತಿಗಳು ಬಾಬಾ ಸಾಹೇಬರ ಬರಹಗಳಲ್ಲಿ ಮತ್ತಿತ್ತರ ಚಿಂತಕರ ಬರಹಗಳಲ್ಲಿ ಸ್ಪಷ್ಟವಾಗಿ ಕಾಣಸಿಗುತ್ತವೆ. ದೈವಿಕ ಸಿದ್ದಾಂತದ ಪ್ರಕಾರ ಬ್ರಾಹ್ಮಣ ಬ್ರಹ್ಮನ ತಲೆಯಲ್ಲಿ ಜನಿಸಿದಾತ ಆದುದರಿಂದ ಆತನ ಕೆಲಸ ಕಾರ್ಯಗಳು ತಲೆಯ ಮೂಲ ಭೂತ ಭಾಗಗಳಾದಂತ ಭಾಯಿ, ಕಣ್ಣು, ಮೂಗು ಮಾಡುವಂತ ಕೆಲಸಗಳನ್ನೇ ಬ್ರಾಹ್ಮಣ ಮಾಡುವಂತದ್ದು, ಅದೇ ರೀತಿ ಬ್ರಾಹ್ಮಣ ಸಂಬಂಧಿ ಇತರ ಜಾತಿ ಸಮುದಾಯಗಳಾದಂತ ಕ್ಷತ್ರಿಯ ಬ್ರಹ್ಮನ ತೋಳಲ್ಲಿ ಜನಿಸಿದಾತ ಆತನ ಕೆಲಸ ಕಾರ್ಯಗಳು ಜನಗಳಿಗೆ ರಕ್ಷಣೆ ನೀಡುವುದು,ಅದೇ ರೀತಿ ವೈಶ್ಯ ಬ್ರಹ್ಮನ ಹೊಟ್ಟೆಯಲ್ಲಿ ಜನಸಿದಾತ ಆತನ ಕೆಲಸ ಕಾರ್ಯಗಳು ವ್ಯಾಪಾರ, ವ್ಯವಹಾರಗಳನ್ನು ನೋಡಿಕೊಳ್ಳುವುದು, ಭಾರತೀಯ ಸಾಮಾಜಿಕ ಸ್ಥರವಿನ್ಯಾಸದ ಕೊನೆಯ ಪಂಗಡವಾದ್ದಂತ ಶೂದ್ರರು ಬ್ರಹ್ಮನ ಪಾದದಲ್ಲಿ ಜನಸಿದವರು ಅವರ ಕೆಲಸ ಕಾರ್ಯಗಳು ಮೇಲಿನ ಇತರರು ಬಿಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನೆರವೇರಿಸುವುದು ಎಂಬುದಾಗಿ ಸಮಾಜವನ್ನು ವಿಂಗಡಣೆಗೊಳಿಸಿ ಉದ್ಯೋಗಗಳನ್ನು ಮಾಡಿಸುವಂತ ಕ್ರಮ ಇತ್ತು.

ಕೆಲವು ಬರಹಗಳ ಪ್ರಕಾರ ಅದರಲ್ಲೂ ಬಾಬಾ ಸಾಹೇಬರ ಬರವಣಿಗೆಯ ಪ್ರಕಾರ ಈ ನಾಲ್ಕು ಪಂಗಡಗಳನ್ನು ಹೊರತು ಪಡಿಸಿ ಮತ್ತೊಂದು ಪಂಗಡ ಭಾರತ ದೇಶದಲ್ಲಿ ಇತ್ತು, ಅವರುಗಳನ್ನು ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿತ್ತು. ಕೆಲವರು ಅವರುಗಳನ್ನು ಹೊರ ಜಾತಿ ಗುಂಪುಗಳು ಎಂಬುದಾಗಿ ಕರೆದರೆ, ಇನ್ನೂ ಕೆಲವರು ಅವುಗಳನ್ನು ಗಿರಿಜನವಾಸಿಗಳು, ಆದಿವಾಸಿಗಳು, ಮೂಲನೀವಾಸಿಗಳು ಎಂಬೆಲ್ಲಾ ಹೆಸರುಗಳಿಂದ ಕರೆಯಲಾಗುತ್ತಿತ್ತು. ಇವರುಗಳ ಉದ್ಯೋಗ ಸಾಮಾನ್ಯವಾಗಿ ಸಮಾಜದ ಮೇಲಿನ ನಾಲ್ಕು ಪಂಗಡಗಳು ಬಿಟ್ಟಿರುವ ಕೆಲಸಗಳಾಗಿದ್ದವು. ಉದಾಹರಣೆಗೆ ಮೇಲು ಜಾತಿಯವರ ಕಾಲಿಗೆ ಕಲ್ಲು-ಮುಳ್ಳುಗಳಿಂದ ಅಪಾಯ ಎಸಗುವುದರಿಂದ ಅವರ ಕಾಲಿಗೆ ಚಪ್ಪಲಿಯನ್ನು ಒಲೆದು ಕೊಡುವುದು, ಮೈಗೆ ಬಟ್ಟೆ

ನೇಯ್ದುಕೊಡುವುದು, ಮಲಗಲು ಚಾಪೆ ಎಣೆಯುವುದು, ತಲೆಗೆ ಎಣ್ಣೆ ಮಾಡಿಕೊಡುವುದು ಅದೇ ರೀತಿ ಅವರುಗಳು ವಾಸಿಸುವ ಸ್ಥಗಳಲ್ಲಿ ಸತ್ತ ಪ್ರಾಣಿ ಪಕ್ಷಿಗಳಿಂದ ವಾಸನೆ ರೋಗ ರುಜುನಗಳು ಎದುರಾಗುವ ಪರಿಸ್ಥಿತಿ ಇದ್ದಲ್ಲಿ ಅವುಗಳನ್ನು ತೆರವುಗೊಳಿಸಿ ಅವುಗಳಿಂದ ಎದುರಾಗುವ ದುಸ್ಥಿತಿಯಿಂದ ಮುಕ್ತಿಗೊಳಿಸುವುದು ಶೂದ್ರರ ಪ್ರಮುಖವಾದ ಕೆಲಸವಾಗಿರುತ್ತದೆ. ಅಂದರೆ ರಸ್ತೆ, ಚರಂಡಿ, ಮಾರುಕಟ್ಟೆಯಂತ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವುದು, ಸತ್ತ ಪ್ರಾಣಿ, ಪಕ್ಷಿ, ಮನುಷ್ಯರನ್ನು ತೆರವುಗೊಳಿಸುವುದು, ಮಲ ಮೂತ್ರಗಳನ್ನು ತೆಗೆದು ಸ್ವಚ್ಛಗೊಳಿಸುವುದು ಇಂತಹ ಹತ್ತು ಹಲವು ಕೆಲಸಗಳನ್ನು ಮಾಡುವುದೇ ಶೂದ್ರರ ಕೆಲಸವಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆ:

ತುಳುನಾಡು ಎಂದು ಕರೆಯಲ್ಪಡುವ ದಕ್ಷಿಣ ಕನ್ನಡ ಜಿಲ್ಲೆಯು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಪ್ರಾಚೀನ ಕಾಲದ ತುಳುನಾಡಿನ ಇತಿಹಾಸವನ್ನು ಕಲೆಹಾಕುತ್ತಾ ಸಾಗಿದರೆ ಕರಾವಳಿ ಪ್ರದೇಶದ ಬಗ್ಗೆ ಮಾಹಿತಿ ದೊರೆಯುತ್ತದೆ. ತುಳು ನಾಡಿನ ಹಿತಿಹಾಸವನ್ನು ಹೇಳುವ ಹಲವಾರು ಶಾಸನಗಳು, ಲೇಖನಗಳು, ಸ್ತೂಪಗಳು ದೊರೆಯುತ್ತವೆ. ಶಾಸನಗಳು ದೊರೆಯುವುದಕ್ಕಿಂತ ಹಿಂದಿನ ತುಳುನಾಡನ್ನು ಪ್ರಾಚೀನ ತುಳುನಾಡು ಎಂದು ಇತಿಹಾಸಕಾರರು ಬರೆದಿದ್ದಾರೆ. ಕ್ರಿ.ಪೂ. 3ನೇ ಶಾತಮಾನದ ಅಶೋಕನ ಶಿಲಾ ಲಿಪಿಗಳಲ್ಲಿ ಕಾಣಿಸುವ ಸತಿಯ ಪುತ್ರ ಎಂಬ ನಾಡಿನ ಹೆಸರನ್ನು ಕುರಿತು ವಿದ್ವಾಂಸರು ಅನೇಕ ರೀತಿಯಲ್ಲಿ ಚರ್ಚಿಸಿದ್ದಾರೆ.ಈ ಸತಿಯ ಪುತ್ರ ಎಂಬ ಪದವು ತುಳುನಾಡನ್ನು ಕುರಿತು ಹೇಳಿರಬೇಕು ಎಂಬ ಅಭಿಪ್ರಾಯವು ಅನೇಕರಲ್ಲಿ ದೊರೆಯುತ್ತದೆ.ಕ್ರಿ.ಶ.ಮೊದಲ ಮೂರು ಶತಮಾನಗಳಲ್ಲಿ ರಚಿತವಾಗಿದೆ ಎಂದು ಭಾವಿಸಲಾಗಿರುವ ಈ ತಮಿಳಿನ ಸಂಘಂ ಕಾಲದ ಪದ್ಯಗಳಲ್ಲಿ ತುಳುನಾಡಿನ ಉಲ್ಲೇಖವಿದೆ.ಇಲ್ಲಿ ತುಳುನಾಡಿನ 'ಕೋಶರ' ಎಂಬ ಜನಾಂಗವನ್ನು ಪ್ರಸ್ತಾಪಿಸಿದ್ದಾರೆ.ಗ್ರೀಸ್ ದೇಶದ ಭೂಗೋಳಶಾಸ್ತ್ರಜ್ಞ ಟಾಲೆಮಿಯು ಭಾರತದ 'ಒಲೊ ಖೊಯ್ಯ'ಎಂಬುದು ಕಡಲ್ಗಳ್ಳರ ಕೇಂದ್ರವಾಗಿತ್ತು ಎಂದು ಹೇಳುತ್ತಾನೆ.ಈ'ಒಲೊ ಖೊಯ್ಯವು' ಆಳುವಖೇಡ

ಅಂದರೆ ‘ತುಳುನಾಡು’ಆಗಿರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.(ಬಿ ಎ ವಿವೇಕ ರೈ ತುಳುನಾಡಿನ ಐತಿಹಾಸಿಕ ಹಿನ್ನಲೆ–1985)

ತುಳುನಾಡು ಅನೇಕ ಜಾತಿ, ಭಾಷೆ, ಸಂಸ್ಕೃತಿಗಳಿರುವ ನಾಡು. ಇಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವ, ವೃತ್ತಿಗಳನ್ನು ಮಾಡುವ ಜನರನ್ನು ಕಾಣಬಹುದು. ಅದರಲ್ಲೂ ಕರಾವಳಿಯು ಸುಂದರವಾದ ಕಡಲು ಇರುವ ಪ್ರದೇಶವಾಗಿರುವುದರಿಂದಾಗಿ ಮೀನು ಹಿಡಿಯುವವರನ್ನೂ ತಾಳೆ ತೆಂಗುಗಳಿರುವುದರಿಂದಾಗಿ ಕಳ್ಳು ತೆಗೆಯುವವರನ್ನೂ ಕಾಣಲು ಸಾಧ್ಯ. ಅದೇ ರೀತಿಯಲ್ಲಿ ತುಳುನಾಡು ಅನೇಕ ರೀತಿಯ ಕುಣಿತಗಳ, ಆರಾಧನೆಗಳ ತವರೂರು. ಆಟಿಕಳಂಜ, ಸೋಣದ ಜೋಗಿ, ಸೋಣದ ಮದಿಮಾನ್, ಕನ್ಯಾಪು, ಮಾದಿರ, ಚೆನ್ನುಕುಣಿತ, ಸುಗ್ಗಿ ಕುಣಿತ ಕರಂಗೋಲು, ಕಂಗೀಲು ಹೀಗೆ ತುಳುನಾಡಿಗೆ ವಿಶಿಷ್ಟ ಅನ್ನಿಸುವ ಕುಣಿತಗಳು, ಅದೇ ರೀತಿಯಲ್ಲಿ ಆರಾಧನೆಗಳನ್ನು ಗಮನಿಸಿದರೆ ಭೂತಾರಾಧನೆ, ನಾಗಾರಾಧನೆ, ಢಕ್ಕಬಲಿ, ತಂಬಿಲ, ಹಿರಿಯರಿಗೆ ಬಡಿಸುವುದು ಹೀಗೆ ಬೇರೆ ಬೇರೆ ಆರಾಧಾನೆಗಳು, ಆಚರಣೆಗಳು ತುಳುನಾಡಿನಲ್ಲಿದೆ. ಆರಾಧನೆಗಳಲ್ಲಿ ಬೇರೆ ಬೇರೆ ಜಾತಿಯ ಜನರು ಶ್ರೇಣಿಕೃತವಾದ ಒಂದು ವ್ಯವಸ್ಥೆಯಲ್ಲಿ ಕೆಲಸಗಳನ್ನು ಮಾಡಿಕೊಂಡು ಬರುತ್ತಾರೆ. ಭೂತಾರಾಧನೆಯೊಂದನ್ನೇ ಗಮನಿಸಿದರೆ ಜಾತಿಗಳಿಗೆ ಅನುಗುಣವಾಗಿ ಕೆಲಸಗಳಿರುವುದನ್ನು ಕಾಣಬಹುದು. ಆಡಳಿತವನ್ನು ನಡೆಸುವ ಮೊಕ್ತೇಸರರು ಜೈನ, ಬಂಟ ಜಾತಿಯವರಾದರೆ ಪೂಜೆ ಮಾಡಲು ಬ್ರಾಹ್ಮಣರು, ದೈವದ ಬಂಡಾರಗಳನ್ನು ತರಲು ಮಡಿವಾಳರು, ಪಲ್ಲಕ್ಕಿ ಹೊರಲು ಕುಂಬಾರರು, ಛತ್ರ ಹಿಡಿಯಲು ಕೆಲಸಗರು, ಪಕ್ಕಿನಿಸಾನಿಗಳನ್ನು ಹಿಡಿಯಲು ಮರಾಠಿಗರು, ದೈವಕ್ಕೆ ಅಮೃತವನ್ನು(ಶೇಂಧಿ) ಕೊಡಲು ಮತ್ತು ಮಡಲಿನ ಸೂಟೆ (ತೆಂಗಿನ ಗರಿಗಳನ್ನು ಮಾಡಿರುವಂತದ್ದು) ಹಿಡಿಯುವವರು ಬಿಲ್ಲವರು, ದೈವಕ್ಕೆ ಕಟ್ಟಲು ಪರವ, ಪಂಬದ, ನಲಿಕೆಯವರೆಂಬುದಾಗಿ ಜಾತಿಯ ನೆಲೆಯಲ್ಲಿ ವಿಭಾಗಿಸುವುದು ತುಳುನಾಡಿನ ದೈವಾರಾಧನೆ ಅಥವಾ ಭೂತಾರಾಧನೆಯಲ್ಲಿ ಕಾಣಸಿಗುತ್ತದೆ. ಇಂತಹ ಶ್ರೇಣಿಕೃತವಾದ ವ್ಯವಸ್ಥೆಯಲ್ಲಿ ಭೂತಾರಾಧನೆಯಲ್ಲಿ ಕಾಣಸಿಗುತ್ತದೆ. ಪಂಚದ್ರಾವಿದ ಭಾಷೆಗಳಲ್ಲಿ ಸುಂದರವೂ

ಸಮೃದ್ಧವೂ ಆದ ತುಳುಭಾಷೆಯನ್ನಾಡುವ ಜನರು ಕಾಸರಗೋಡಿನ ಚಂದ್ರಗಿರಿ ನದಿಯಿಂದ, ಉಡುಪಿಯ ಕಲ್ಯಾಣಪುರ ನದಿವರೆಗೆ, ಪಶ್ಚಿಮಘಟ್ಟಗಳಿಂದ ಕಡಲ ತಡಿವರೆಗೆ ವ್ಯಾಪಿಸಿದ್ದು, ಈ ಪ್ರದೇಶವನ್ನು ತುಳುನಾಡೆಂದು ಕರೆಯುವರು. ಇಲ್ಲಿನ ಜನರು ಆಚಾರ, ವಿಚಾರ, ನಡೆ– ನುಡಿ ಚಿಂತನ ಸಂಸ್ಕೃತಿಗಳಲ್ಲೊಂದು ಸ್ವಂತಿಕೆಯಿದ್ದು, ವೈಶಿಷ್ಟ್ಯಪೂರ್ಣವಾದ ಮೌಲಿಕತೆಯನ್ನು ಪಡೆದು ಕನ್ನಡನಾಡಿನ ಹಿರಿಮೆ ಗರಿಮೆಗಳನ್ನು ವರ್ಧಿಸುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಾಮಾಜಿಕ ಜೀವನ:

ದಕ್ಷಿಣ ಕನ್ನಡ ಜಿಲ್ಲೆಯು ವೈವಿಧ್ಯತೆಯಿಂದ ಕೂಡಿರುವ ಜಿಲ್ಲೆಯಾದರೂ ಈ ಜಿಲ್ಲೆಯು ಸರ್ವಧರ್ಮಗಳ ಬೀಡಾಗಿದ್ದು, ಎಲ್ಲಾ ಜಾತಿ ಧರ್ಮಗಳು ತಮ್ಮದೇ ಆದ ಇತಿಹಾಸವನ್ನು ಹೊಂದಿದೆ. ಐತಿಹಾಸಿಕವಾಗಿ ಈ ಭಾಗದ ಹೆಚ್ಚಿನ ಜನರ ಉದ್ಯೋಗ ಕೃಷಿಯಾಗಿತ್ತು. ಕೃಷಿ ಭೂಮಿಯ ಒಡೆತನ ಮಾತ್ರ ಕೆಲವೇ ಕೆಲವು ಭೂಮಾಲೀಕ ಕುಟುಂಬಗಳ ಒಡೆತನದಲ್ಲಿ ಇದ್ದಿತ್ತು. ಇನ್ನುಳಿದ ಜನರು ಗೇಣಿದಾರರಾಗಿ ಕೂಲಿ ಕಾರ್ಮಿಕರಾಗಿ ಜೀವನ ನಿರ್ವಹಿಸುತ್ತಿದ್ದರು. ಇವರುಗಳಲ್ಲಿ ಬಂಟ ಸಮುದಾಯದವರು ಗೇಣಿಗಳಾದರೆ ಇನ್ನುಳಿದ ಜಾತಿಗಳು ತಮ್ಮ ತಮ್ಮ ಕುಲಸಬುಗಳಾದಂತ ಮೂರ್ತೆ ತೆಗೆಯುವುದು (ಬಿಲ್ಲವರು), ಮಡಿಕೆ ಮಾಡುವುದು (ಕುಲಾಲರು) ಎಣ್ಣೆ ತೆಗೆಯುವುದು (ಗಾಣಿಗರು), ದೇವಸ್ಥಾನಗಳಲ್ಲಿ ವಾದ್ಯ ಬಾರಿಸುವುದು (ಶೇರಿಗಾರರು), ಹೂ ಕಟ್ಟುವುದು (ಮೋಹಿಲಿಗಳು) ಭೂತ ಕಟ್ಟುವುದು (ನಲಿಕೆ, ಪಂಬದ, ಪರವವರು), ವ್ಯಾಪಾರ ಮಾಡುವುದು (ಕೊಂಕಣಿಗಳು, ಬ್ಯಾರಿಗಳೂ (ಮುಸ್ಲಿಮರು)), ಮರಗೆಲಸ, ಚಿನ್ನದ ಕೆಲಸ ಮಾಡುವವರು(ವಿಶ್ವಕರ್ಮರು), ಮೀನು ಹಿಡಿಯುವವರು (ಮೊಗವೀರರು ಮತ್ತು ಬ್ಯಾರಿಗಳು (ಮುಸ್ಲಿಮರು), ಬಟ್ಟೆ ಶುದ್ಧಮಾಡುವವರು (ಅಗಸರು), ತಲೆ ಕೂದಲು ತೆಗೆಯುವವರು (ಭಂಡಾರಿಗಳು), ಕೂಲಿ ಕೆಲಸ ಮಾಡುವವರು (ಮುಗೇರರು, ಮುಂಡಾಳರು, ಬೈರರು, ಗೌಡರು, ಕುಡುಬಿಗಳು, ಮರಾಟಿ ನಾಯ್ಕ್ ಬುಡಕಟ್ಟಿನ ಸಮುದಾಯದವರು, ಮಲೆ ಕುಡಿಯ ಬುಡಕಟ್ಟಿನ ಜನರು) ಮತ್ತು ರಸ್ತೆ, ಚರಂಡಿ, ಸೌಚಾಲಯ, ಸಾರ್ವಜನಿಕ ಸ್ಥಳಗಳನ್ನು, ಧಾರ್ಮಿಕ ಸ್ಥಳಗಳನ್ನು, ಸಂತೆ, ಮಾರುಕಟ್ಟೆ ಇರುವ ಸ್ಥಳಗಳನ್ನು ಸ್ವಚ್ಚಗೊಳಿಸುವ ಕೆಲಸ ಮಾಡುತ್ತಿದ್ದಂತವರು ತಮ್ಮ

ತಮ್ಮ ಕೆಲಸಗಳನ್ನು ಕುಲಕಸುಬುಳೆಂಬಂತೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಪುರೋಹಿತಶಾಹಿತ್ವಕ್ಕೆ ಸಿಲುಕಿಹೋಗಿದ್ದ ದಕ್ಷಿಣ ಕನ್ನಡದ ಕೆಲವು ಜಾತಿಗಳು ತಮ್ಮ ಬದುಕನ್ನೇ ಕಳೆದುಕೊಂಡಿದ್ದವು. ಇದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲದೇ ಇಡೀ ಭಾರತ ಖಂಡದ ಮೂಲನಿವಾಸಿಗಳು ಜಾತಿಯ ಅಸ್ಪೃಶ್ಯತೆಯ, ತಾರತಮ್ಯ, ಶೋಷಣೆಗೆ ಒಳಗಾಗಿ ಇಂದು ಕೂಡ ಸಮಸ್ಯೆಗಳನ್ನು ಎದುರಿಸುವಂತದ್ದನ್ನು ಕಾಣಬಹುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರವನ್ ಸಮುದಾಯ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ "ಹಿಂದುಳಿದ ಜನಾಂಗ" ಎಂದು ಕರೆಯಿಸಿಕೊಳ್ಳುವ ಪರವವನ್ ಸಮುದಾಯದವರ ಮುಖ್ಯ ಉದ್ಯೋಗವೇ ದೈವಕ್ಕೆ ಅಥವಾ ಭೂತಕ್ಕೆ ಕಟ್ಟುವುದು, ದೈವಗಳ ಕುರಿತಂತೆ ಅಧಿಕೃತವಾಗಿ ಮಾತನಾಡುವವರಾಗಿರುವುದರಿಂದಾಗಿ ಇವರನ್ನು ದೈವರಾಧನೆಯ "ಅಧಿಕೃತ ಒಡೆಯರು" ಎಂಬುದಾಗಿಯೂ ಕರೆಯುತ್ತಾರೆ. ಪರವರು ವಾಸ ಮಾಡುವ ಕೇರಿಯನ್ನು "ಪರವರಬೊಟ್ಟ" ಎಂದು ಕರೆಯುತ್ತಾರೆ. ಪರವ ಜನಸಮುದಾಯಗಳು ಮುಖ್ಯವಾಗಿ ಬೆಳ್ತಂಗಡಿ ತಾಲೂಕಿನ ಮುಂಡಾಜೆ, ಕೊಯ್ಯುರು, ಇಂದಬೆಟ್ಟು, ಮಂಜೊಟ್ಟಿ, ಧರ್ಮಸ್ಥಳ, ಬಳಂಜ ಕಾರ್ಕಳ ತಾಲೂಕಿನ ಬಾರಾಡಿ, ಸಾಣೂರು ಸಿರಿಲಾಲ್, ಅರುವ, ಅಳದಂಗಡಿ, ಬಳಂಜ, ಕೆರ್ವಾಸೆ(ಬಜಗೋಳಿ), ನಾರಾವಿ, ವೇಣೂರು(ಗುಂಡೂರಿ) ಪುತ್ತೂರು ತಾಲೂಕಿನ ಪಡುಮಲೆ, ಕಾಣಿಯೂರು, ನೆರೆಂಕಿ(ಉಪ್ಪಿನಂಗಡಿ) ಇಚ್ಲಂಪಾಡಿ, ಮಾಡಾವು,ನೆರಿಮುಗೆರ್, ಬಂಟ್ವಾಳ ತಾಲೂಕಿನ ಕಾಪುಮಜಲು, ಕಾವಲ್ ಕಟ್ಟೆ, ಸರಪಾಡಿ , ವಾಮದಪದವು, ಮಂಗಳೂರು ತಾಲೂಕಿನ ಮೂಡಬಿದಿರೆ, ಪೊಳಲಿ, ಸಿದ್ಧಕಟ್ಟೆ, ಸುಳ್ಯ ತಾಲೂಕಿನಲ್ಲಿ ಕೆಲವು ಮನೆಗಳನ್ನು ಕಾಣಬಹುದಾಗಿದೆ. ಕೆಲವು ಪ್ರದೇಶದ ಪರವರು ತಮ್ಮ ಸ್ವಂತ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸಮಾಡುತ್ತಿದ್ದರೆ ಮತ್ತೆ ಕೆಲವರು ಧಣಿಗಳು ಕೊಟ್ಟಿರುವ ಸ್ಥಳದಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಕೆಲವರು ಸರಕಾರ ನೀಡಿದ ಐದು ಸೆಂಟ್ಸ್ ಮನೆಗಳಲ್ಲಿ ವಾಸ ಮಾಡುವುದನ್ನು ಕಾಣಬಹುದು. ಕೆಲವು ಸ್ಥಳಗಳಲ್ಲಿ ದೈವಸ್ಥಾನಗಳ ಒಡೆಯರು ಪರವರಿಗೆ ಮನೆ ಕಟ್ಟಿಸಿಕೊಟ್ಟು ಅಲ್ಲಿಯೇ ಇದ್ದು ಆರಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಅನುಕೂಲ

ಮಾಡಿಕೊಟ್ಟಿರುವುದು ಕೂಡ ಇದೆ. ಇಷ್ಟಲ್ಲದೆ ಬೇರೆ ಬೇರೆ ಊರುಗಳಲ್ಲಿ ನೆಲೆಸಿ ಉದ್ಯೋಗದಲ್ಲಿರುವವರು ಇತ್ತೀಚೆಗೆ ಕಾಣಸಿಗುತ್ತಾರೆ. ಇತ್ತೀಚೆಗೆ ಶ್ರೀಮಂತರಾಗಿದ್ದರೂ ತಮ್ಮ ಕುಲ ಕಸುಬನ್ನು ಬಿಡದೆ ನಡೆಸಿಕೊಂಡು ಬರುವವರನ್ನೂ ಕಾಣುವುದು ಸಾಧ್ಯ, ಅವರು ದೂರದ ಊರಿನಲ್ಲಿ ಉದ್ಯೋಗದಲ್ಲಿದ್ದರೂ ತಾವು ಮಾಡುತ್ತಿದ್ದ ಕೆಲಸವನ್ನು ಆ ಸಂದರ್ಭದಲ್ಲಿ ಮಾಡಿ ಹೋಗುತ್ತಾರೆ. ತಂದೆ ಮಾಡುತ್ತಿದ್ದ ಕೆಲಸವನ್ನು ಮಗ, ಮಕ್ಕಳು ದೊಡ್ಡವರಾಗಿಲ್ಲದ ಸಂದರ್ಭದಲ್ಲಿ ಅವರ ಹತ್ತಿರದ ಸಂಬಂಧಿಗಳು ದೈವಕ್ಕೆ ಕಟ್ಟುತ್ತಾರೆ ಈ ರೀತಿಯಲ್ಲಿ ಅವರ ಚಾಕರಿಗಳು ಮುಂದುವರಿದುಕೊಂಡು ಬಂದಿದೆ. ದೈವ ನರ್ತನದ ಜೊತೆಗೆ ಪರವನ್ ಸಮುದಾಯದ ಕೆಲವು ಹಿರಿಯ ವ್ಯಕ್ತಿಗಳು ನಾಟಿ ಮದ್ದು, ನೂಲು ಕಟ್ಟುವಂತಹ ಕೆಲಸಗಳನ್ನೂ ಮಾಡಿಕೊಂಡು ಬಂದಿರುತ್ತಾರೆ. ಇಂದಿಗೂ ಸಹ ಪರವನ್ ಸಮುದಾಯದ ಕೆಲವರು ಬುಟ್ಟಿ ಚಾಪೆ ಹೆಣೆಯುವಂತ ಕೆಲಸಗಳನ್ನು ಮಾಡುತ್ತಾರೆ. ದೈವಾರಾಧನೆ ಅಥವಾ ಭೂತಾರಾಧನೆಯ ಮಾಧ್ಯಮವಾಗಿ ಕೆಲಸ ಮಾಡುತ್ತಿರುವ ಪರವ ಜಾತಿಯ ಕಲಾವಿದರು ತಮ್ಮನ್ನು ಪೂರ್ತಿಯಾಗಿ ದೈವ ನರ್ತನೆಯ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರೂ ಎಲ್ಲಾ ಸಂದರ್ಭಗಳಲ್ಲಿ ನರ್ತನೆಯ ಕೆಲಸಗಳಿರುವುದಿಲ್ಲ. ಆಗ ತಮ್ಮ ಜೀವನವನ್ನು ನಡೆಸಲು ಇವರು ಇತರ ಕೆಲಸಗಳನ್ನು ಮಾಡುತ್ತಾರೆ. ಪರವ ಸಮುದಾಯದಲ್ಲಿ ಮಹಿಳೆಯರು ಪುರುಷನ ಕೆಲಸಗಳಲ್ಲಿ ಸುಮಾರು ಅರ್ಧಕ್ಕಿಂತ ಹೆಚ್ಚಿನ ಕೆಲಸಗಳನ್ನು ಮಾಡುತ್ತಾರೆ. ಉದಾಹರಣೆಗೆ ದೈವಾರಾಧನೆಯ ಸಂದರ್ಭದಲ್ಲಿ ಮನೆಯಿಂದ ಹೊರಡುವಾಗ ಆರಾಧನೆಯಲ್ಲಿ ಬಳಸುವ ಎಲ್ಲಾ ಸಾಮಾಗ್ರಿಗಳನ್ನು ಸಿದ್ಧಗೊಳಿಸಿರುವುದು, ಕಟ್ಟಿಡುವುದು, ತೆಗೆದುಕೊಂಡು ಹೋಗುವಾಗ ತಾನು ಕೆಲವು ವಸ್ತುಗಳನ್ನು ಹಿಡಿದುಕೊಳ್ಳುವುದು. ಆರಾಧನೆ ನಡೆಯುವ ಸ್ಥಳಕ್ಕೆ ಹೋಗಿ ಅಲ್ಲಿ ದೈವಾರಾಧನೆಯ, ಮಾಧ್ಯಮವಾಗಿ ಕೆಲಸ ಮಾಡುವ ಕಲಾವಿದನಿಗೆ ವಸ್ತುಗಳನ್ನು ಸಿದ್ಧಗೊಳಿಸಿ ಕೊಡುವುದು, ತೆಂಗಿನ ಮರದ ಗರಿ (ತಿರಿ) ಗಳನ್ನು ಧರಿಸಲು ಬೇಕಾದಂತೆ ಕತ್ತರಿಸಿಕೊಡುವುದು, ಬೇಕಾದವುಗಳನ್ನು ಅವನು ಕೇಳಿದಂತೆ ತೆಗೆದು ಕೊಡುವುದು, ಬಣ್ಣಗಾರಿಕೆಗೆ ಕುಳಿತಾಗ ಅವನ ಜೊತೆಯಲ್ಲಿಯೇ ಪರಿಸರ ನಿರ್ಮಾಣಕ್ಕೆ ಬೇಕಾದ ಪಾಡ್ದನಗಳನ್ನು ಹಾಡುವುದು, ತೆಂಬರೆಯನ್ನು ಬಡಿಯುವುದು– ಹೀಗೆ ಪ್ರತಿಯೊಂದು ಕೆಲಸಗಳಲ್ಲಿಯೂ ಹೆಣ್ಣು ಕೈ ಜೋಡಿಸುವುದನ್ನು ಕಾಣಬಹುದು.

ಸಾಹಿತ್ಯ ಪರಮಾರ್ಶೆ

ರಾಜಗೋಪಾಲ ಕ. ವೆಂ. 1989. "ತುಳುವರ ಅಚರಣೆಗಳಲ್ಲಿ ಕಲಾವಂತಿಕೆ" ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು: ಭೂತದ ಒಂದು ಆರಾಧನಾ ವಿಧಿಯನ್ನು "ಕೋಲ"ಎಂದೇ ಕರೆಯುತ್ತಾರೆ. "ಕೋಲ" ಎಂದರೆ ಅಲಂಕಾರವೆಂದೂ ಅರ್ಥ.ತುಳುನಾಡಿನ ಭೂತಗಳ ಅಲಂಕಾರ ವೈಭವವನ್ನು ಕಂಡು ಯಾರಾದರೂ ತಲೆದೂಗಲೇಬೇಕು.ಭೂತಗಳು ಪ್ರಾಚೀನವಾದಷ್ಟೂ ಹಾಗೆಯೇ ಆರಾಧಿಸುವ ಜನವರ್ಗ ಸಂಪ್ರದಾಯಶೀಲವಾದಷ್ಟೂ ಪ್ರಕೃತಿ ಸಹಜವಾದ ಸರಳ ವೇಷಪರಿಕರಗಳು ಹೆಚ್ಚಾಗಿ ಕಂಡುಬರುತ್ತವೆ.ಇದು ದೇಶ ವಿದೇಶಗಳ ಎಲ್ಲ ಜನಪದ ಕಲಾಸಂದರ್ಭದಲ್ಲಿ ಕಂಡು ಬರುವ ಅಂಶ ಭೂತಗಳು ಅರ್ವಾಚೀನವಾದ ಹಾಗೆ ಅಂತೆಯೇ ಆರಾಧಿಸುವ ಜನವರ್ಗ ಪ್ರತಿಷ್ಟಿತರಾದ ಹಾಗೆ ಭೂತವೇಷಗಳಲ್ಲೂ ಚಿನ್ನ,ಬೆಳ್ಳಿ,ಕಂಚು,ಇತ್ಯಾದಿ ಲೋಹಾಭರಣಗಳೂ ಬಣ್ಣದ ಬಟ್ಟೆಗಳ ತೊಡವುಗಳೂ ಸೇರ್ಪಡೆಯಾಗಿ,ಭೂತಗಳು ಹೆಚ್ಚು ವೈಭವೀಕರಿಸಲ್ಪಡುವುದನ್ನು ಕಾಣಬಹುದು.

ನರೆಂದ್ರ ರೈ ದೇರ್ಲ 2018. "ಭೂತಾರಾಧನೆ –ತುಳುನಾಡ ಅಂಗಳದಲ್ಲಿ ಕೋಲ–ನೇಮಗಳ ರಂಗು" ತರಂಗ ನವೆಂಬರ್. ತುಳುನಾಡಿನಲ್ಲಿ ಭೂತ ದೈವ ನರ್ತಕರಾಗುವವರು ಸಮಾಜದ ಕೆಳಸ್ತರದವರು, ಇವರೆಲ್ಲಾ ಹೆಚ್ಚು ಓದದವರು ಆರ್ಥಿಕವಾಗಿ ಸುದೃಢರಲ್ಲ. ಸ್ವಭಾವತ: ಮೃದು ಜನರು ಇಷ್ಟಾದರೂ ತಮ್ಮ

ಕ್ಷೇತ್ರದಲ್ಲಿ ಅನುಭವಿಗಳಾಗಿ ನರ್ತನ , ಮಾತು, ನ್ಯಾಯ ತೀರ್ಮಾನ, ಹೀಗೆ ಬಹು ಬಗೆಗಳಲ್ಲಿ ಆ ಸಂದರ್ಭವನ್ನು ಆಳುವ ನಿಭಾಯಿಸುವ ಪ್ರಾವಿಣ್ಯವನ್ನು ಪಡೆದಿದ್ದಾರೆ. ಇಂತಹ ಭೂತದೊಳಗಡೆಯ ವ್ಯಕ್ತಿಗಳಿಗೆ ವೇಷ ಕೆಳಗಿಟ್ಟ ಮೇಲೆ ಗೌರವ , ಮಾನ್ಯತೆ ಸಿಗದಿರುವುದು ನೋವಿನ ಸಂಗತಿ . ಆರಾಧನೆ ಇಲ್ಲದ ದಿನಗಳಲ್ಲಿ ಅದೇ ಗುತ್ತಿನ ಮನೆಯ ಅಂಗಳದ ಮೂಲೆಯಲ್ಲಿ ನಿಲ್ಲುವ 'ಅಡ್ಡ ಬಿದ್ದೆ ದೇವರೇ' ಎಂದು ಶರಣಾಗುವ ಇವರು ನೇಮದ ಒಂದು ದಿನ ಬಿಟ್ಟು ಉಳಿದ ಹಾಗೆ ಪರಕೀಯರಾಗಿ ಬಿಡುತ್ತಾರೆ. ಇಡೀ ಭೂತಾರಾಧನೆಯ ಸ್ವರೂಪವನ್ನು ಗಮನಿಸಿದರೆ ಜಾತಿ ವ್ಯವಸ್ಥೆಗೆ ಅನುಗುಣವಾಗಿ ಮೇಲ್ ಸ್ತರದಿಂದ ಜವಾಬ್ದಾರಿಯ ಹಂಚಿಕೆಯಾಗಿದೆ. ಆದರೆ ಭೂತವಾಗಿ ಈ ಸಾಲಿನ ಮೇಲೆ ನಿಲ್ಲುವ ದೈವ ನರ್ತಕ ಈ ಮಾಧ್ಯಮದಿಂದ ಹೊರಗಡೆ ನಿಂತಾಗ ತೀರಾ ಕೊನೆಯವನಾಗಿ ಬಿಡುತ್ತಾನೆ. ಪ್ರಗತಿಪರ ಸಾಮಾಜಿಕ ಚಿಂತಕರ ಪ್ರಕಾರ ಶ್ರೀಮಂತ ಜಮೀನ್ದಾರರಿಂದ ತುಳಿತಕ್ಕೆ ಒಳಪಟ್ಟು ವರ್ಷವಿಡೀ ಶರಣಾಗಿ ಅಡ್ಡ ಬೀಳುವ ಮನಸ್ಥಿತಿಯೇ ವರ್ಷದಲ್ಲಿ ಒಂದು ದಿನ ಆಕ್ರೋಶಗೊಂಡು ಭೂತವಾಗುತ್ತದೆ. ವರ್ಷವಿಡೀ ಅಡ್ಡ ಬೀಳುವ ಒಳಮನಸ್ಸು ಆದೊಂದು ದಿನ ಭೂತವಾಗಿ ಸ್ಫೋಟಗೊಂಡು ತನ್ನ ಮುಂದೆ ಇರುವವರನ್ನು ತಲೆ ಬಗ್ಗಿಸುವಂತೆ ಮಾಡುತ್ತದೆ. ನೇಮದ ದಿನ ಗುತ್ತಿನ ಮಹಾಮನೆಯ ಒಳಗಡೆ ಧೂಮಾವತಿಯೋ ಪಿಲಿ ಭೂತವೋ ಆಗಿ ಒಳಗೆ ಹೋಗಿ ಬೆಳ್ಳಿಯ ಲೋಟದಲ್ಲಿ ಗುತ್ತಿಯ ಯಜಮಾನ್ತಿಯ ಕೈಯಿಂದ ಹಾಲು ಕುಡಿಯುವ ದೈವ ನರ್ತಕ, ಗಗ್ಗರ ಕೆಳಗಿಳಿಸಿದ ಮೇಲೆ ಪರಕೀಯನಾಗಿ ಬಿಡುತ್ತಾನೆ. ಮರುದಿನದಿಂದ ಆ ಗುತ್ತು ಮನೆ ಬಿಡಿ ಕೋಲದಲ್ಲಿ ಸಹವರ್ತಿಗಳಾಗಿದ್ದ ಪೂಜಾರಿ, ಮಡಿವಾಳನ ಮನೆಗೂ ಆತ ಪ್ರವೇಶಿಸುವುದಿಲ್ಲ. ದೈವ ನುಡಿಗಟ್ಟಿನಲ್ಲಿ 'ಪತ್ತಪ್ಪೆ ಜೋಕ್ಲು ಪದಿನೆಮ್ಮ ಬರಿತಗ್ಲು ಒಂಜಾದ (ಹತ್ತು ತಾಯಿಯ ಮಕ್ಕಳು , ಹದಿನೆಂಟು ಬಳಿಯವರು ಒಂದಾಗಿ) ಎಂಬ ಉದಾತ್ತಾ ಆಶಯವೇನೋ ಇದೆ. ಇಂಥ ಮಾತು ಬರೀ ಪಾಡ್ದನ ಸಂಧಿ ನುಡಿಗಷ್ಟೇ ಸೀಮಿತವಾಗದೇ ಕಾರ್ಯ ರೂಪಕ್ಕೆ ಬರಬೇಕು– ನರೇಂದ್ರ ರೈ ದೇರ್ಲ.

Suryanath Kamath U. 1977. "South Kanara Directory Magala Publications Mangalore" ಲೇಖಕರು ದಕ್ಷಿಣ ಕನ್ನಡ ಜಿಲ್ಲೆಯ ಸಂಸ್ಕೃತಿಯನ್ನು ವಿವರಿಸುತ್ತಾ ಜಿಲ್ಲೆಯ ಪ್ರಾಕೃತಿಕ

ಸೌಂದರ್ಯವನ್ನು ವಿವರಿಸುತ್ತಾರೆ ದಕ್ಷಿಣ ಕನ್ನಡ ಜಿಲ್ಲೆಯ ಪವಾಡ ಪುರುಷರು ಹೇಗೆ ದೈವತ್ವವನ್ನು ಪಡೆದುಕೊಂಡರು ಎಂಬುದಾಗಿ ತಿಳಿಸುತ್ತಾರೆ. ದೈವಾರಾಧನೆಯ ಪ್ರತೀಕವಾದಕೋಲ ನಡೆಯುವ ಸಂದರ್ಭದಲ್ಲಿ ನಡೆಸುವ ವಿಧಿ ವಿಧಾನಗಳನ್ನು ವಿವರಿಸುತ್ತಾರೆ.

John Sturrock 1894. "Gazzeter of India – Govt of Karnataka" ಈ ವರದಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವೈವಿಧ್ಯಮಯ ಜೀವನ ಶೈಲಿ ಸಾಮಾಜಿಕ ಹವ್ಯಾಸಗಳು, ಸಂಪ್ರದಾಯಗಳು ಕಲೆ, ಸಂಸ್ಕೃತಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಇದರ ಜೊತೆಗೆ ದೈವಾರಾಧನೆಯ ವಿವಿಧ ಆಚರಣೆಗಳಾದ ಕೋಲ, ಬಂಡಿ, ನೇಮ ಅಗೆಲು, ತಂಬಿಲ, ಮುಂತಾದವುಗಳ ನಿಯಮಗಳನ್ನು ಪರಿಚಯಿಸುತ್ತದೆ.

ಇದರ ಜೊತೆಗೆ ದೈವ ನರ್ತಕ ಸಮುದಾಯಗಳಾದ ನಲಿಕೆ, ಪಂಬದ, ಪರವನ್ ಜನಾಂಗದ ಆಚಾರ ವಿಚಾರ ಸಂಸ್ಕೃತಿಗಳನ್ನು ವಿವರಿಸುತ್ತದೆ. ಈ ವರದಿಯಲ್ಲಿ ಉಲ್ಲೇಖಿಸುವಂತೆ ಪಂಬದ ಜನಾಂಗದವರು ನಲಿಕೆ ಮತ್ತು ಪರವನ್ ಜನಾಂಗದವರಿಗಿಂತ ಉನ್ನತ ಸ್ಥಾನದಲ್ಲಿದ್ದು ರಾಜನ್ ದೈವಗಳಿಗೆ ಮಾತ್ರ ಕೋಲವನ್ನು ಕಟ್ಟುತ್ತಾರೆ ಆಷಾಡ ತಿಂಗಳಲ್ಲಿ ಆ ನಲಿಕೆ ಜನಾಂಗದವರು ಆಚರಿಸುವ ಆಟಿಕಳೆಂಜ ನರ್ತನದ ಬಗ್ಗೆಯೂ ಉಲ್ಲೇಖವಿದೆ. ವರದಿಯ ಪ್ರಕಾರ ಪರವನ್ ಜನಾಂಗದವರು ತಿನ್ನೈವೆಲ್ಲಿ ಕಡಲ ತೀರದ ಪ್ರದೇಶದಿಂದ ಮುಸಲ್ಮಾನರ ಶೋಷಣೆಗೆ ಒಳಪಟ್ಟು ವಲಸಿಗರಾಗಿ ಬಂದವರೆಂದು ಪ್ರಸ್ತಾಪಿಸುತ್ತಾರೆ.

ಸಂಶೋಧನಾ ವಿಧಾನ

ಸಂಶೋಧಕನು ಸಂಶೋಧನೆ ಮಾಡುವ ಪೂರ್ವದಲ್ಲಿ ಹೇಗೆ ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣೆ ಮಾಡಬೇಕೆಂದು ಪೂರ್ವಭಾವಿಯಾಗಿ ಹಾಕಿಕೊಂಡ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ.ಇದು ಸಂಶೋಧಕರಿಗೆ ಅತ್ಯಂತ ಅಗತ್ಯ. ಏಕೆಂದರೆ ಸಂಶೋಧನೆಯು ಅನೇಕ ಕಾರ್ಯಾಚರಣೆ ಬಗ್ಗೆ ಅಗತ್ಯ ಮಾಹಿತಿಯನ್ನು ಒದಗಿಸುತ್ತದೆ. ಕನಿಷ್ಟ ಅವಧಿಯಲ್ಲಿ ಹೆಚ್ಚಿನ ಮಾಹಿತಿ ಸಂಗ್ರಹಿಸಲು ಅವಕಾಶ ಒದಗಿಸುತ್ತದೆ. ಸಂಶೋಧನಾ ಕಾರ್ಯಕ್ಕೆ ಒಂದು ವಿನ್ಯಾಸದ ಅವಶ್ಯಕತೆ ಸಹ ಇರುತ್ತದೆ. ಅಧ್ಯಯನದ ಸಂಶೋಧನಾ ವಿನ್ಯಾಸವೆಂದರೆ ಉದ್ದೇಶಿತ ಸಂಶೋಧನೆಯ ನೀಲಿ ನಕಾಶೆ.

ಪ್ರಸ್ತುತ ಅಧ್ಯಯನವು ಸಂಶೋಧನಾ ವಿಧಾನದ ಕುರಿತ ಮಾಹಿತಿಯನ್ನು ವಿವರಿಸುತ್ತದೆ. ಈ ಅಧ್ಯಯನದಲ್ಲಿ ಪ್ರಾಥಮಿಕ ಮಾಹಿತಿಯ ಜೊತೆಗೆ ಹಲವಾರು ವಿದ್ವಾಂಸರುಗಳು ವಿವಿಧ ಬಗೆಯಲ್ಲಿ, ವಿವಿಧ ಸಮುದಾಯಗಳ ಮೇಲೆ, ವಿವಿಧ ಸ್ಥಳ ಮತ್ತು ಕಾಲಮಾನದಲ್ಲಿ ಮಾಡಿರುವ ಅಧ್ಯಯನಗಳನ್ನು ಪರಾಮರ್ಶೆ ಮಾಡಲಾಗಿದೆ. ಈ ಎಲ್ಲಾ ಬಗೆಯ ಮಾಹಿತಿಯನ್ನು, ದತ್ತಾಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ದಕ್ಷಿಣ

ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಪರವನ್ ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಯನ್ನು ವಿಶ್ಲೇಷಣೆ ಮಾಡಲಾಗಿದೆ. ಪ್ರಾಥಮಿಕ ಮತ್ತು ಮಾದ್ಯಮಿಕ ದತ್ತಾಂಶಗಳನ್ನು ಬಳಕೆ ಮಾಡುವ ಮೂಲಕ ಅಧ್ಯಯನವನ್ನು ಹೆಚ್ಚು ಪರಿಕಲ್ಪನಾತ್ಮಕ, ಸೈದ್ಧಾಂತಿಕ, ಪ್ರಾಯೋಗಿಕ ಅಧ್ಯಯನಗಳೊಂದಿಗೆ ಪರವನ್ ಸಮುದಾಯದಲ್ಲಿ ಕಂಡು ಬರುವ ಇತ್ತೀಚಿನ ಬದಲಾವಣೆಗಳನ್ನು ಗುರುತಿಸುವ ಪ್ರಯತ್ನವನ್ನು ಈ ಅಧ್ಯಯನದ ಮೂಲಕ ಮಾಡಲಾಗಿದೆ.

ಪ್ರಸ್ತುತ ಸಂಶೋಧನೆಯ ಧ್ಯೇಯೋದ್ದೇಶಗಳು

1. ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದ ಸಾಮಾಜಿಕ ಆರ್ಥಿಕ ಸ್ಥಿತಿಗತಿಯನ್ನು ವಿಶ್ಲೇಷಿಸುವುದು.
2. ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದವರ ಅದರಲ್ಲೂ ದೈವನರ್ತನೆ ಮಾಡುವವರ ಉದ್ಯೋಗವನ್ನೊಳಗೊಂಡು ಸಾಮಾಜಿಕ ಮತ್ತು ಸಾಂಸ್ಕೃತಿಕ ಆಚರಣೆಗಳನ್ನು ವಿಶ್ಲೇಷಿಸುವುದು.
3. ಪರವನ್ ಸಮುದಾಯದವರ ಶಿಕ್ಷಣ ಮಟ್ಟವನ್ನು ತಿಳಿಯುವುದು.
4. ಪರವನ್ ಸಮುದಾಯದ ಆರೋಗ್ಯದ ಸ್ಥಿತಿಗತಿಯನ್ನು ಅಧ್ಯಯನ ಮಾಡುವುದು.
5. ಪರವನ್ ಸಮುದಾಯದ ಜನರಿಗೆ ಲಭ್ಯವಿರುವ ಸರ್ಕಾರಿ ಸವಲತ್ತುಗಳು ಮತ್ತು ಅವುಗಳ ಬಳಕೆಯಲ್ಲಿ ಎದುರಾದ ಸವಾಲುಗಳನ್ನು ಅಧ್ಯಯನ ಮಾಡುವುದು.

ಸಂಶೋಧನಾ ವಿನ್ಯಾಸ:

ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಸಂಶೋಧಕರು ಸ್ಥರೀಕೃತ ಯಾದೃಚ್ಛಿಕ ನಮೂನಾ ವಿಧಾನವನ್ನು ಆಧರಿಸಿಕೊಂಡು, ಪ್ರಶ್ನಾವಳಿಯ ಮೂಲಕ ಸಮೀಕ್ಷೆಯನ್ನು ಮಾಡುವ ಮೂಲಕ ಪ್ರಾಥಮಿಕ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಈ ಸಂಶೋಧನಾ ವಿನ್ಯಾಸವು ಸಂಶೋಧಕರಿಗೆ ಕ್ಷೇತ್ರದ ಪ್ರತಿಕ್ರಿಯಾದಾರರು ಮತ್ತು ಅವರ ಕುಟುಂಬ ಸದಸ್ಯರ ಜತೆ ಅಂತಃಕ್ರಿಯೆ ನಡೆಸುವ ಮೂಲಕ ಹಲವಾರು ಮಾಹಿತಿಗಳ ಸಂಗ್ರಹಣೆಗೆ ಸಹಾಯಕವಾಯಿತು.ಇದರ ಜತೆಗೆ ಸಂಶೋದಕನು ಹೊಸ ಹೊಸ ಸಂಶೋಧನಾ ಅನುಭವಗಳನ್ನು ಪಡೆಯಲು ಸಹಾಯಕವಾಗಿದೆ. ಇದರ ಜೊತೆಗೆ ಪರವನ್ ಸಮುದಾಯದವರ ಕೆಲವು ಪ್ರಮುಖ ವ್ಯಕ್ತಿಗಳನ್ನು ಸಂದರ್ಶನ ಮಾಡುವ ಮೂಲಕ ಪರವನ್ ಸಮುದಾಯದವರ ಬಗ್ಗೆ ಹೆಚ್ಚು ವಿಚಾರಗಳ ಕುರಿತು ಚರ್ಚಿಸಿ, ಹಲವಾರು ಬಗೆಯ ಮಾಹಿತಿಗಳನ್ನು ಸಂಗ್ರಹಿಸಲಾಯಿತು.

ಅಧ್ಯಯನದ ವ್ಯಾಪ್ತಿ:

2011ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 20, 89,649 ರಷ್ಟು ಜನಸಂಖ್ಯೆ ಇದ್ದು, ಇದರಲ್ಲಿ 10, 34,714 ಪುರುಷರು ಮತ್ತು 10, 54,935 ಮಹಿಳೆಯರು ಇದ್ದಾರೆ. ಪ್ರತಿ ಚದರ ಕಿಲೋಮೀಟರ್ ಗೆ 457 ರಷ್ಟು ಜನ ಸಾಂದ್ರತೆಯನ್ನು ಹೊಂದಿದೆ. ಈ ಜನಗಣತೆಯ ಪ್ರಕಾರ ಲಿಂಗಾನುಪಾತವು 10.11%. ಇದ್ದು, 1020 ರಷ್ಟರಲ್ಲಿ 6 ವರ್ಷದವರೆಗಿನ ಮಕ್ಕಳ ಲಿಂಗಾನುಪಾತ 947 ತಲುಪಲಿದೆ. ಅದೇ ರೀತಿ ಸಾಕ್ಷರತಾ ಪ್ರಮಾಣವು ೮೮.೫೭ ಆಗಿದೆ. ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ 93.13 ಮತ್ತು ಸ್ತ್ರೀಯರ ಸಾಕ್ಷರತೆ 84.13 ಆಗಿದೆ. ಇಲ್ಲಿ 8 ವಿಧಾನಸಭಾ ಕ್ಷೇತ್ರಗಳಿದ್ದು, ಪ್ರಸ್ತುತ 331 ಗ್ರಾಮಗಳು, 230 ಗ್ರಾಮ ಪಂಚಾಯತಿಗಳು, 1 ನಗರಪಾಲಿಕೆ, 4 ಪುರಸಭೆ, ನಗರಸಭೆಯೂ, 5 ಪಟ್ಟಣ ಪಂಚಾಯತಿ, 5 ತಾಲೂಕು ಪಂಚಾಯತಿಗಳೂ ಇವೆ. ಇಷ್ಟೆಲ್ಲಾ ಶಕ್ತಿಯೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯು 5 ತಾಲೂಕುಗಳಾಗಿ

ವಿಂಗಡಣೆಗೊಂಡಿದೆ. ಅವುಗಳಲ್ಲಿ ಮಂಗಳೂರು ಕೇಂದ್ರ ಸ್ಥಳವಾಗಿದ್ದು, ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಸುಳ್ಯ, ಮೂಡಬಿದ್ರೆ ಮತ್ತು ಕಡಬಗಳು ಇದರ ಇತರ ತಾಲೂಕುಗಳು ಆಗಿವೆ.

ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಮತ್ತು ಸಾಮಾಜಿಕ ಮತ್ತು ಆರ್ಥಿಕವಾಗಿ ವಿಶಾಲವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರವನ್ ಸಮುದಾಯವು ಪರಿಶಿಷ್ಟ ಜಾತಿಗೆ ಸೇರಿದ್ದು, ಇದೊಂದು ದೈವನರ್ತಕ ಸಮುದಾಯವಾಗಿದೆ. ಜನಸಂಖ್ಯೆಯಲ್ಲಿ ಅತ್ಯಂತ ಸಣ್ಣ ಸಮುದಾಯವಾಗಿದ್ದು, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಹಳಷ್ಟು ಹಿಂದುಳಿದಿರುವ ಸಮುದಾಯ ಇದಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯದ್ಯಾಂತ ಇವರ ಜನಸಂಖ್ಯೆಯು ಹಂಚಿ ಹೋಗಿದೆ. ಈ ಸಮುದಾಯದ ಆರ್ಥಿಕ, ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಬಗ್ಗೆ ಯಾವುದೇ ರೀತಿಯ ಸಮಾಜಶಾಸ್ತ್ರೀಯ ಅಧ್ಯಯನಗಳು ನಡೆಯದೆ ಇದ್ದಿರುವುದರಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪರವನ್ ಸಮುದಾಯದ ಜನಸಂಖ್ಯೆಯ ಬಗ್ಗೆ ನಿಖರವಾದ ಅಂಕಿ ಅಂಶಗಳು ಇಲ್ಲದೇ ಇರುವುದರಿಂದ, ಪರವನ್ ಸಮಾಜ ಸುಧಾರಕ ಸಂಘದ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಪರವನ್ ಸಮುದಾಯದ ಒಟ್ಟು ಜನಸಂಖ್ಯೆಯು ಸರಿಸುಮಾರು 10,700 ಇರಬಹುದು ಎಂಬುದಾಗಿ ಸಮುದಾಯದ ಮುಖಂಡರು ಅಂದಾಜಿಸುತ್ತಾರೆ. ಪರವನ್ ಜನಸಂಖ್ಯೆಯು ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲೂಕುಗಳಲ್ಲಿ ಹಂಚಿಹೋಗಿದೆ. ಇವುಗಳಲ್ಲಿ ಬೆಳ್ತಂಗಡಿ ಹಾಗೂ ಪುತ್ತೂರು ತಾಲೂಕಿನಲ್ಲಿ ಪರವನ್ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವುದು ಕಂಡುಬರುತ್ತದೆ. ಅದೇ ರೀತಿ ಸುಳ್ಯ ತಾಲೂಕಿನಲ್ಲಿ ಅತ್ಯಂತ ಕಡಿಮೆ ಪರವನ್ ಸಮುದಾಯದ ಜನರು ವಾಸಮಾಡುತ್ತಿರುವುದು ಕಂಡು ಬರುತ್ತದೆ. ಇನ್ನುಳಿದ ಪುತ್ತೂರು ಮತ್ತು ಬಂಟ್ವಾಳ ತಾಲೂಕಿನಲ್ಲಿ ಪರವನ್ ಸಮುದಾಯದವರ ಜನಸಂಖ್ಯೆ ಬಹಳ ವಿರಳ ಎಂಬುದಾಗಿಯೇ ಹೇಳಬಹುದು. ಈ ಐದು ತಾಲೂಕುಗಳಲ್ಲಿ ಇರುವ ಪರವನ್ ಸಮುದಾಯದವರ ಜನಸಂಖ್ಯೆಗೆ ಅನುಗುಣವಾಗಿ ಸ್ತರೀಕೃತ ಯಾದೃಚ್ಛಿಕ ನಮೂನಾ ಮಾದರಿಯ ಮೂಲಕ ಪುರುಷ ಮತ್ತು ಸ್ತ್ರೀ ಲಿಂಗಾವಾರು

ಜನಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡು ಒಟ್ಟು 300 ನಮೂನೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಗಿದೆ.

ಸಂಶೋಧನಾ ವಿಧಾನ ಮತ್ತು ಮಾಹಿತಿ ಸಂಗ್ರಹಣೆ:

ಸ್ತರೀಕೃತ ಯಾದೃಛಿತ ಮಾದರಿಯ ಮೂಲಕ ಆಯ್ಕೆ ಮಾಡಲಾದ 300 ಜನ ಮಾಹಿತಿದಾರರನ್ನು ಪ್ರಶ್ನಾವಳಿಯನ್ನು ರಚಿಸಿ, ಆ ಪ್ರಶ್ನಾವಳಿಯನ್ನು ಸಂದರ್ಶನ ಮಾಡುವುದರ ಮೂಲಕ ಮಾಹಿತಿ ಸಂಗ್ರಹಿಸಲಾಯಿತು. ಸಂದರ್ಶನ ಮಾಡುವುದರ ಮೂಲಕ ಮಾಹಿತಿ ಸಂಗ್ರಹಿಸಿದರೆ, ಅವಲೋಕನದ ಮೂಲಕ ಕೂಡ ಹಲವಾರು ವಿಷಯಗಳನ್ನು ಅಧ್ಯಯನಕ್ಕೆ ಸಂಬಂಧಿಸಿದಂತೆ ಕಲೆಹಾಕಲಾಯಿತು. ಹೀಗೆ ಸಂಗ್ರಹಿಸಿದ ಮಾಹಿತಿಯನ್ನು ಸರಳ ವಿಧಾನದ ಮೂಲಕ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ರೀತಿಯಲ್ಲಿ ತಯಾರು ಮಾಡಿದ ಸಂಶೋಧನಾ ಪ್ರಬಂಧವನ್ನು ನಾಲ್ಕು ಅಧ್ಯಯನಗಳನ್ನಾಗಿ ವಿಂಗಡಣೆ ಮಾಡಿಕೊಂಡು, ಪ್ರತಿಯೊಂದು ಸಂಗತಿಯನ್ನು ಅಯಾಯ ಅಧ್ಯಯನಗಳ ವ್ಯಾಪ್ತಿಯಲ್ಲಿ ಅರ್ಥಪೂರ್ಣವಾದ ರೀತಿಯಲ್ಲಿ ವಿವರಿಸಲಾಯಿತು.

ಅಧ್ಯಯನದ ವರ್ಗೀಕರಣ:

ಅಧ್ಯಯನವನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡುವ ಉದ್ದೇಶದಿಂದ ಇಡೀ ಅಧ್ಯಯನವನ್ನು ಐದು ಪ್ರಮುಖ ಅಧ್ಯಯನಗಳಾಗಿ ಈ ಕೆಳಕಂಡ ರೀತಿಯಲ್ಲಿ ವರ್ಗೀಕರಿಸಲಾಗಿದೆ.

ಮೊದಲನೆಯ ಅಧ್ಯಯನ ಪೀಠಿಕೆ: ಈ ಅಧ್ಯಯನದಲ್ಲಿ ಪರವನ್ ಸಮುದಾಯದ ಆರ್ಥಿಕ ಸಾಮಾಜಿಕ ಹಿನ್ನೆಲೆಯ ಬಗ್ಗೆ ವಿವರವಾದ ಪೀಠಿಕೆಯನ್ನು ನೀಡಲಾಗಿದೆ. ಇದರ ಜೊತೆಗೆ ಕೆಲವೊಂದು ಪ್ರಮುಖ ಪರಿಕಲ್ಪನೆಗಳಾದಂತ ದೈವಾರಧನೆ, ಉದ್ಯೋಗ, ಸಾಮಾಜಿಕ ವಿಧಗಳು, ಮತ್ತು ಅದರ ಸೈದ್ಧಾಂತಿಕ ದೃಷ್ಟಿಗಳನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಯನ ಸಾಹಿತ್ಯ ಪರಾಮರ್ಶನ: ಈ ಅಧ್ಯಯನದಲ್ಲಿ ಸಂಶೋಧನ ವಿಷಯಕ್ಕೆ ಸಂಬಂಧಿಸಿದ ಹಲವು ಬರಹಗಾರರ ಸಾಹಿತ್ಯಗಳನ್ನು ಪರಮಾರ್ಶೆ ಮಾಡಲಾಗಿದೆ. ಸಾಹಿತ್ಯ ಮರಮಾರ್ಶೆ ಮಾಡುವಾಗ ಕೂಡ ಕೆಲವೊಂದು ಪರಿಕಲ್ಪನೆಗಳಿಗೆ ಹೊಂದುಕೊಳ್ಳುವ ಹಾಗೆ ಸಾಹಿತ್ಯವನ್ನು ಪರಮಾರ್ಶೆ ಮಾಡಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧವನ್ನು ಕಲ್ಪಿಸಲಾಗಿದೆ.

ಮೂರನೆಯ ಅಧ್ಯಯನ ಸಂಶೋಧನ ವಿಧಾನ: ಈ ಅಧ್ಯಯನದಲ್ಲಿ ಸಂಶೋಧಕ ಯಾವ ಮಾದರಿಯನ್ನು , ಯಾವ ರಚನೆಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು ಎಂಬುದನ್ನು ವಿಶ್ಲೇಷಿಸಲಾಗಿದೆ. ಇದರ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೈವನರ್ತಕ ಸಮುದಾಯವೆಂದೇ ಗುರುತಿಸಿಕೊಂಡಿರುವ ಪರವನ್ ಸಮುದಾಯದವರ ಜನಸಂಖ್ಯೆಗೆ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಂಡು ಮಾಹಿತಿ ಸಂಗ್ರಹಿಸಿ ವಿಅಜ್ಞಾನಿಕ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ನಾಲ್ಕನೆಯ ಅಧ್ಯಯನ ದತ್ತಾಂಶ ವಿಶ್ಲೇಷಣೆ: ಈ ಅಧ್ಯಯನದಲ್ಲಿ ಸಂಗ್ರಹಿಸಿದ ದತ್ತಾಂಶವನು ಸೈದ್ಯಾಂತಿಕವಾಗಿ ಅರ್ಥ ನೀಡುವ ರೀತಿಯಲ್ಲಿ ವರ್ಗೀಕರಣ , ಭಾಗಗಳಾಗಿ ಮಾಡಿಕೊಂಡು ಅವುಗಳನ್ನು ಅಯಾಯ ಪರಿಕಲ್ಪನೆಗಳ ಅಡಿಯಲ್ಲೇ ವಿವರಿಸಲಾಗಿದೆ. ಮಾಹಿತಿಯನ್ನು ವಿವಿಧ ಮಾದರಿಯ ಗ್ರಾಪ್, ದತ್ತಾಂಶಗಳನ್ನು ರಚಿಸುವುದರ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ಐದನೆಯ ಅಧ್ಯಯನ; ಈ ಅಧ್ಯಯನದಲ್ಲಿ ಒಟ್ಟು ಅಧ್ಯಯನದ ಪಲಿತಾಂಶವನ್ನು ತಿಳಿಸಿ, ಅದಕ್ಕೆ ಪ್ರಮುಖ ಪಲಿತಗಳನ್ನು ತಿಳಿಯಪಡಿಸುವುದು ಮತ್ತು ಪರವನ್ ಸಮುದಾಯದ ಏಳಿಗೆಗಾಗಿ ಕೆಲವೊಂದು ಸಲಹೆ ಸೂಚನೆಗಳನ್ನು ನೀಡಲಾಗಿದೆ.

ಅಧ್ಯಯನದ ಇತಿಮಿತಿಗಳು:

ಪ್ರಸ್ತುತ ಅಧ್ಯಯನವು ಈ ಕೆಳಕಂಡ ಅಧ್ಯಯನದ ಮಿತಿಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ.

- ಪರವನ್ ಸಮುದಾಯದವರು ಉಡುಪಿ, ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿದ್ದು, ಪ್ರಸ್ತುತ ಅಧ್ಯಯನವು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ.
- ಪ್ರಸ್ತುತ ಅಧ್ಯಯನವು ಪರವನ್ ಸಮುದಾಯದ ಪುರುಷ ಹಾಗೂ ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ದತ್ತಾಂಶ ವಿಶ್ಲೇಷಣೆಯ ಪ್ರಮುಖ ಫಲಿತಾಂಶಗಳು

ಪರವನ್ ಸಮುದಾಯದವರ ಸಾಮಾಜಿಕ–ಆರ್ಥಿಕ ಸ್ಥಿತಿಗತಿ

ಒಂದು ಸಮುದಾಯದ ಸಾಮಾಜಿಕ–ಆರ್ಥಿಕ ಸಂಶೋಧನಾ ಅಧ್ಯಯನದಲ್ಲಿ, ವ್ಯಕ್ತಿಗಳ ಲಿಂಗವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆ ಸಮುದಾಯದ ಲಿಂಗದ ಆಧಾರದಲ್ಲಿ ಜನಸಂಖ್ಯೆಯ ಸರಾಸರಿಗೆ ಅನುಗುಣವಾಗಿ ಆರ್ಥಿಕ ಸ್ಥಿತಿಗತಿಯನ್ನು ವಿಶ್ಲೇಷಣೆ ಮಾಡಲಾಗುತ್ತದೆ. ಒಂದು ಸಮುದಾಯದಲ್ಲಿ ಗಂಡು ಮತ್ತು ಹೆಣ್ಣಿ

ಮಕ್ಕಳ ಸಂಖ್ಯೆ ಸಮಾನವಾಗಿದ್ದರೆ ಅಂತಹ ಸಮುದಾಯಗಳ ಆರ್ಥಿಕ ಸಾಮಾಜಿಕ ಸ್ಥಿತಿಗತಿ ಉತ್ತಮ ಸ್ಥಿತಿಯಲ್ಲಿ ಇರುತ್ತದೆ ಎಂಬುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ಅದೇ ರೀತಿ ಹೆಣ್ಣು ಮಕ್ಕಳ ಸಂಖ್ಯೆ ಜಾಸ್ತಿ ಇದ್ದಂತಹ ಕುಟುಂಬಗಳು ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿರುವ ಉದಾಹರಣೆಗಳು ಕೂಡ ನಮಗೆ ಸಿಗುತ್ತವೆ. **ಲಿಂಗಾದರಿತ ಮಾಹಿತಿಯ ವಿವರ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಪರವನ್ ಸಮುದಾಯದವರ ಸಂದರ್ಶನ ನಡೆಸಿದ 300 ಕುಟುುಂಬದಲ್ಲಿನ ಸದಸ್ಯರುಗಳ ಲಿಂಗಾನುಪಾತವು ಮೇಲಿನ ಕೋಷ್ಟಕದಲ್ಲಿ ತಿಳಿಯಪಡಿಸಿದಂತೆ ಇದ್ದಿರುವುದು ಕಂಡು ಬರುತ್ತದೆ. ಈ ಮೇಲಿನ ಕೋಷ್ಟಕದಲ್ಲಿ ಲಿಂಗಾದಾರಿತ ಮಾಹಿತಿಯ ಪ್ರಕಾರ 300 ಜನ ಮಾಹಿತಿದಾರರಲ್ಲಿ ಹೆಚ್ಚಿನವರು 88.3 ಶೇಕಡ ಮಾಹಿತಿದಾರರು ಪುರುಷರಾಗಿರುತ್ತಾರೆ. ಇನ್ನುಳಿದ 11.7 ಶೇಕಡ ಮಾಹಿತಿದಾರರು ಮಹಿಳೆಯರು ಆಗಿರುವುದು ಕಂಡು ಬಂದಿದೆ.

ಮಾಹಿತಿದಾರರ ವಯಸ್ಸು: ಪರವನ್ ಸಮುದಾಯದ ಯಾವ ವಯಸ್ಸಿನ ಜನರು ಎಷ್ಟೆಷ್ಟು ಇದ್ದಾರೆ ಎಂಬ ಮಾಹಿತಿಯನ್ನು ಕಲೆ ಹಾಕಲಾಗಿದೆ. ಮೇಲಿನ ಕೋಷ್ಟಕದಲ್ಲಿ ತೋರಿಸಿದ ಹಾಗೆ 300 ಜನ ಮಾಹಿತಿದಾರರಲ್ಲಿ ಸರಿಸುಮಾರು 60 ವರ್ಷಕ್ಕೆ ಮೇಲ್ಪಟ್ಟವರಿದ್ದು ಅವರಲ್ಲಿ 41 ರಿಂದ 50 ವಯಸ್ಸಿನವರು ಹೆಚ್ಚಿನ ಸಂಖ್ಯೆಯಲ್ಲಿದ್ದು ಶೇಕಡ 35.7 ರಷ್ಟಿದ್ದಾರೆ. ಸರಿಸುಮಾರು 15 ಶೇಕಡ ಮಾಹಿತಿದಾರರು 60 ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನರು ಆಗಿರುತ್ತಾರೆ. ಇವರುಗಳಲ್ಲಿ ಹೆಚ್ಚಿನವರು ಮಹಿಳೆಯರು ಆಗಿದ್ದಾರೆ. ಇನ್ನುಳಿದವರಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ ಶೇಕಡ 35.7 (107) ಶೇಕಡ ಮಾಹಿತಿದಾರರು 40 ವರ್ಷದಿಂದ 50 ವರ್ಷದ ವಯಸ್ಸಿನವರು ಆಗಿದ್ದಾರೆ. ಇವರುಗಳಲ್ಲಿ ಕೆಲವರು ದೈವ ನರ್ತಕರಾಗಿ ಕೆಲಸ ನಿರ್ವಹಿಸಿದರೆ, ಇನ್ನು ಕೆಲವರು ಕೂಲಿ ಕೆಲಸಗಳನ್ನು ಮಾಡಿಕೊಂಡು ಜೀವನ ಕಳೆಯುತ್ತಿರುವುದು ಕಂಡು ಬಂದಿದೆ. ಶೇಕಡ 22 (66) ಮಾಹಿತಿದಾರರು ವಯಸ್ಸಿನಲ್ಲಿ 51 ರಿಂದ 60 ವಯಸ್ಸಿನವರು ಆಗಿದ್ದಾರೆ. ಮತ್ತು ಶೇಕಡ 19 (57) ಮಾಹಿತಿದಾರರು 31 ರಿಂದ 40 ವಯಸ್ಸಿನವರು ಆಗಿದ್ದಾರೆ.

ಮಾಹಿತಿದಾರರ ಮಾತೃ ಭಾಷೆ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಹೆಚ್ಚಿನ ಪರವನ್ ಸಮುದಾಯದವರು ತುಳುವನ್ನು ತಮ್ಮ ಮಾತೃ ಭಾಷೆಯನ್ನಾಗಿ ಮಾತನಾಡುವುದು ಕಂಡು ಬಂದಿದೆ. ಅವರುಗಳಲ್ಲಿ ಸರಿಸುಮಾರು 99.3 (298) ಶೇಕಡ ಮಾಹಿತಿದಾರರು ತುಳುವನ್ನು ತಮ್ಮ ಮಾತೃ ಭಾಷೆಯನ್ನಾಗಿ ಮಾತನಾಡುವವರು ಇದ್ದಿರುವುದು ತಿಳಿದುಬಂದಿದೆ. ಇನ್ನುಳಿದ ಕೇವಲ 07(2) ಶೇಕಡ ಮಾಹಿತಿದಾರರು ಕನ್ನಡವನ್ನು ತಮ್ಮ ಮಾತೃ ಭಾಷೆಯನ್ನಾಗಿ ಮಾತನಾಡುವವರು ಇದ್ದಾರೆ ಎಂಬುದು ತಿಳಿದುಬಂದಿದೆ.

ಮಾಹಿತಿದಾರರ ವಾಸ ಸ್ಥಳದ ವಿವರ: 300 ಜನ ಮಾಹಿತಿದಾರರಲ್ಲಿ ತಮ್ಮ ವಾಸ ಸ್ಥಳದ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ಸರಿಸುಮಾರು 88 (264) ಶೇಕಡಾ ಮಾಹಿತಿದಾರರು ಗ್ರಾಮೀಣ ಪ್ರದೇಶದವರಾಗಿದ್ದು ಕಂಡು ಬಂದಿದೆ. ಇನ್ನುಳಿದ ಕೇವಲ 12 (25) ಶೇಕಡ ಮಾಹಿತಿದಾರರು ನಗರ ಪ್ರದೇಶದಲ್ಲಿ ವಾಸವಾಗಿರುವುದು ಕಂಡು ಬಂದಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ದೈವನರ್ತನ ಕಾಯಕ ಮಾಡುವವರೂ ಕೂಡಾ ತಮ್ಮ ಬಿಡುವಿನ ಸಮಯದಲ್ಲಿ ಕೃಷಿ ಸಂಬಂಧಿತ ಕೆಲಸಗಳಲ್ಲಿ ತೊಡಗಿಕೊಂಡಿರುವುದು ಕಂಡು ಬರುತ್ತದೆ.

ವೈವಾಹಿಕ ಸ್ಥಾನಮಾನ: ಪರವನ್ ಮಾಹಿತಿದಾರರ ವೈವಾಹಿಕ ಜೀವನದ ಬಗ್ಗೆ ಮಾಹಿತಿ ಸಂಗ್ರಹಿಸಿದಾಗ ತಿಳಿದು ಬಂದ ಮಾಹಿತಿ ಏನೆಂದರೆ 300 ಜನ ಮಾಹಿತಿದಾರರಲ್ಲಿ ಸರಿಸುಮಾರು 13 ಶೇಕಡ ಮಾಹಿತಿದಾರರು ವಿಧವೆಯರು ಮತ್ತು ವಿಧುರರು ಇದ್ದಾರೆ. ವಿಧವೆಯರ ಸಂಖ್ಯೆಯಷ್ಟೇ ಸಂಖ್ಯೆಯಲ್ಲಿ ವಿವಾಹ ವಿಚ್ಛೇದಿತರ ಸಂಖ್ಯೆ ಸಮುದಾಯದವರಲ್ಲಿ ಕೂಡ ಇರುವುದನ್ನು ಗಮನಿಸಬಹುದು. 300 ಮಾಹಿತಿದಾರರಲ್ಲಿ ಶೇಕಡ 1.3 ಜನ ಮಾಹಿತಿದಾರರು ವಿವಾಹ ವಿಚ್ಛೇದಿತರು ಇರುವುದು ಕಂಡು ಬಂದಿದೆ. 300 ಜನ ಮಾಹಿತಿದಾರರಲ್ಲಿ ಶೇಕಡ ಅವಿವಾಹಿತರು ಸಿಕ್ಕಿರುತ್ತಾರೆ. ಸರಿಸುಮಾರು 4.30 ಶೇಕಡ ಮಾಹಿತಿದಾರರು ಅವಿವಾಹಿತರು ಆಗಿದ್ದಾರೆ. ಇವರು 40 ವರ್ಷ ಪ್ರಾಯದ ಆಸು ಪಾಸಿನವರು ಅಗಿರುತ್ತಾರೆ. ಪರವನ್ ಸಮುದಾಯದಲ್ಲಿ ಹೆಣ್ಣು ಮಕ್ಕಳು ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದು ಸಮುದಾಯದ ಗಂಡು ಮಕ್ಕಳು ಶಿಕ್ಷಣವನ್ನು ಪಡೆಯಲು ನಿರಾಸಕ್ತಿಯನ್ನು ತೋರಿಸುತ್ತಿದ್ದಾರೆ. ಅಧ್ಯಯನದ ಸಂಧರ್ಭದಲ್ಲಿ ತಿಳಿದು ಬಂದ ಒಂದು ಪ್ರಮುಖ ಅಂಶವೆಂದರೆ

ಅವಿವಾಹಿತರಾಗಿ ಉಳಿಯಲು ಶೈಕ್ಷಣಿಕ ಸಮನ್ವಯತೆಯ ಕೊರತೆ ಎಂಬುದಾಗಿ ಅನೇಕ ಹಿರಿಯರು ತಮ್ಮ ಅಭಿಪ್ರಾಯ ತಿಳಿಸುತ್ತಾರೆ.

ಪರವನ್ ಸಮುದಾಯದ ಕೌಟುಂಬಿಕ ವ್ಯವಸ್ಥೆ: ಅವಿಭಕ್ತ ಕುಟುಂಬವಾಗಿದ್ದ ಪರವನ್ ಸಮುದಾಯವು ಪ್ರಸ್ತುತ ಸಮಾಜದಲ್ಲಿ ವಿಭಕ್ತ ಕುಟುಂಬವಾಗಿ ರೂಪುತಳೆದಿದೆ. ಒಟ್ಟು 300 ಜನ ಮಾಹಿತಿದಾರರಲ್ಲಿ ಕೇವಲ ಶೇಕಡಾ 9.5 ಮಾಹಿತಿದಾರ ಕುಟುಂಬಗಳು ಮಾತ್ರ ಇನ್ನೂ ಅವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿರುವುದಾಗಿ ತಿಳಿಸಿದ್ದಾರೆ. ಇವರುಗಳೆಲ್ಲರೂ ಹಳ್ಳಿಯಲ್ಲಿ ಅಥವಾ ತುಂಬಾ ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವವರು ಆಗಿರುತ್ತಾರೆ. ಇನ್ನುಳಿದ 90.50 ಶೇಕಡ ಕುಟುಂಬಗಳು ವಿಭಕ್ತ ಕುಟುಂಬ ವ್ಯವಸ್ಥೆಯನ್ನು ಹೊಂದಿರುವಂತವುಗಳು ಆಗಿರುತ್ತವೆ. ಆದರೆ ಕೆಲವು ಕುಟುಂಬಗಳು ತಮ್ಮ ಕಾರ್ಯಾತ್ಮಕ ಅವಿಭಕ್ತತೆಯನ್ನು ಉಳಿಸಿಕೊಂಡು ಮುಂದುವರಿಯುತ್ತಿರುವುದು ಕೂಡ ಕಂಡು ಬಂದಿದೆ. ಅವುಗಳು ದೈಹಿಕವಾಗಿ ಅವಿಭಕ್ತ ಕುಟುಂಬಗಳು ಆಗಿದ್ದರೂ ಕೆಲವೊಂದು ಧಾರ್ಮಿಕ ಆಚರಣೆಯ ಸಂದರ್ಭದಲ್ಲಿ ಕುಟುಂಬದ ಎಲ್ಲಾ ವ್ಯಕ್ತಿಗಳು ಒಟ್ಟು ಸೇರುತ್ತಾರೆ, ಅದರ ಮೂಲಕ ಅವಿಭಕ್ತತೆಯ ಲಕ್ಷಣವನ್ನು ಉಳಿಸಿಕೊಂಡು ಬರುತ್ತಿದ್ದಾರೆ ಎನ್ನಬಹುದು.

ಪರವನ್ ಸಮುದಾಯದ ವಂಶಾವಳಿಯ ವಿಧ. ಅಧ್ಯಯನದಲ್ಲಿ ತಿಳಿದುಬರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡುಬರುವ ಪರವನ್ ಸಮುದಾಯದವರಲ್ಲಿ ಪಿತ್ರ ಪ್ರಧಾನ ವಂಶಾವಳಿ ವ್ಯವಸ್ಥೆಯನ್ನು ಹಿಂದಿನ ಕಾಲದಿಂದಲೂ ಮುಂದುವರೆಸಿಕೊಂಡು ಬಂದಿದೆ, ಇಂದಿಗೂ ಆಚರಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಪ್ರಸ್ತುತ ಸಮಾಜದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ನಾವು ಪುರುಷ ಪ್ರಾಧಾನ್ಯತೆಯನ್ನು ಹೆಚ್ಚು ಕಾಣಬಹುದಾಗಿದ್ದು, ಕೌಟುಂಬಿಕ ವಿಚಾರಗಳಲ್ಲಿ ಕೆಲವೊಂದು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ಸ್ತ್ರೀಯರ ಅಭಿಪ್ರಾಯಗಳಿಗೂ ಮನ್ನಣೆಯನ್ನು ನೀಡಲಾಗುತ್ತದೆ. ಆದರೆ ಕುಟುಂಬ ವ್ಯವಸ್ಥೆಯಲ್ಲಿ ಪಿತೃ ಪ್ರಧಾನ ವಂಶಾವಳಿಯೇ ಮುಂದುವರಿಯುತ್ತಿದೆ.

ಉದ್ಯೋಗದ ವಿಧಗಳು: ಪರವನ್ ಸಮುದಾಯದ ಮಾಹಿತಿದಾರರು ನಿರ್ವಹಿಸುವ ವಿವಿಧ ಉದ್ಯೋಗಗಳ ಮಾಹಿತಿಯ ಪ್ರಕಾರ ಹೆಚ್ಚಿನವರು ಕೂಲಿ ಕಾರ್ಮಿಕರಾಗಿ ಕೃಷಿಯೇತರ ವಲಯಗಳಲ್ಲಿ ಅಂದರೆ ಕಟ್ಟಡ ಕಾರ್ಮಿಕ, ವಾಹನ ಚಾಲಕ, ಮುಂತಾದ ಕೆಲಸಗಳಲ್ಲಿ ತೊಡಗಿರುವವರ ಸಂಖ್ಯೆ ಅಧಿಕವಾಗಿದೆ. 300 ಜನ ಮಾಹಿತಿದಾರರಲ್ಲಿ ಶೇಕಡ 48 ರಷ್ಟು ಮಾಹಿತಿದಾರರು ಕೃಷಿಯೇತರ ಚಟುವಟಿಕೆಗಳಾದ ಕೂಲಿ ಕೆಲಸ, ಬುಟ್ಟಿ ಹೆಣೆಯುವುದು, ಬೀಡಿ ಕಟ್ಟುವುದು ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡಿರುವುದು ಕಂಡು ಬಂದಿದೆ. ಕೂಲಿ ಕೆಲಸ ಮಾಡುವವರಲ್ಲಿ ಪುರುಷರು 46 ಶೇಕಡ ಇದ್ದು ಮಹಿಳೆಯರು ಶೇಕಡ 62.8 ಶೇಕಡದಷ್ಟಿದ್ದಾರೆ. ಪರವನ್ ಸಮುದಾಯದ ಕುಲಕಸುಬಾದಂತಹ ದೈವನರ್ತನದಲ್ಲಿ ತೊಡಗಿಕೊಂಡವರು ಶೇಕಡ 27.3 ರಷ್ಟು ಇದ್ದಾರೆ. ಕಂಪೆನಿಗಳಲ್ಲಿ ಕೆಲಸ ಮಾಡುವವರಲ್ಲಿ ಶೇಕಡ 3.7 ರಷ್ಟಿದ್ದಾರೆ. ಪರವನ್ ಸಮುದಯದಲ್ಲಿ ಸರ್ಕಾರಿ ನೌಕರರ ಸಂಖ್ಯೆ ತುಂಬ ಕಡಿಮೆಯೆಂದೇ ಹೇಳಬಹುದು, ಪೋಷಕರಿಗೆ ಶಿಕ್ಷಣದ ಬಗ್ಗೆ ಅಷ್ಟೊಂದು ಮಾಹಿತಿ ಇಲ್ಲದಿರುವುದು ಅದೇ ರೀತಿ ಪರವನ್ ಸಮುದಾಯದ ಬಹುತೇಕ ಮಾಹಿತಿದಾರರು ಅನಕ್ಷರಸ್ಥರಾಗಿದ್ದು ಪರವನ್ ಸಮುದಾಯದಲ್ಲಿ ಸರಕಾರಿ ನೌಕರರ ಸಂಖ್ಯೆ ಕಡಿಮೆಯಾಗಲು ಇದೇ ಕಾರಣವೆಂದು ಹೇಳಬಹುದು. ಪ್ರಸ್ತುತ ಅಧ್ಯಯನದಲ್ಲಿ ಪರವನ್ ಸಮುದಾಯದ ಸರ್ಕಾರಿ ನೌಕರಾರ ಸಂಖ್ಯೆ 2.7 ರಷ್ಟಿದೆ.

ಮೂಲಭೂತ ಸೌಕರ್ಯಗಳು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಪರವನ್ ಸಮುದಾಯದವರ ಮನೆಗಳನ್ನು ಈ ಕೆಳಕಂಡ ನಾಲ್ಕು ವಿಧಗಳಲ್ಲಿ ವಿಂಗಡಿಸಲಾಗಿದೆ. ಹೆಚ್ಚಿನ ಪರವನ್ ಸಮುದಾಯದ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವುದರಿಂದ ಹಂಚಿನ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಎಂಬುದು ತಿಳಿದು ಬಂದಿದೆ. ದಕ್ಷಿಣಕನ್ನಡ ಜಿಲ್ಲೆಯು ಅತಿ ಹೆಚ್ಚಿನ ಉಷ್ಣಾಂಶ ಹೊಂದಿದ ಜಿಲ್ಲೆಯಾಗಿರುವುದರಿಂದ ಇಲ್ಲಿಯ ಜನರು ಹಂಚಿನ ಮನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಪರವನ್ ಸಮುದಾಯದ ಬಹುತೇಕ ಮನೆಗಳು ಹಂಚಿನ ಮನೆಗಳಾಗಿದ್ದು ಇದಕ್ಕೆ ಆರ್ಥಿಕ ಸಮಸ್ಯೆಯು ಕಾರಣವೆಂದು ಹೇಳಬಹುದು. 300 ಜನ

ಮಾಹಿತಿದಾರರಲ್ಲಿ ಶೇಕಡ 70.33 (211) ಮಾಹಿತಿದಾರರು ಹಂಚಿನ ಮನೆಯಲ್ಲಿ ಇದ್ದಿರುವುದು ಕಂಡುಬಂದಿದೆ.

ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ವಲಸೆ ಬಂದ ಜನರು ಉತ್ತಮ ಸಂಭಾವನೆ ಇದ್ದಿರುವುದರಿಂದ ಅವರುಗಳು ಆರ್.ಸಿ.ಸಿ ಮನೆಗಳನ್ನು ನಿರ್ಮಿಸಿಕೊಂಡು ಉತ್ತಮ ಜೀವನ ನಡೆಸುತ್ತಿರುವುದು ಸಂಶೋಧನೆಯಲ್ಲಿ ಕಂಡು ಬಂದಿದೆ. ಇಲ್ಲಿ ಆರ್.ಸಿ.ಸಿ ಮನೆಗಳಲ್ಲಿ ವಾಸಿಸುತ್ತಿರುವವರ ಸಂಖ್ಯೆ ಶೇಕಡಾ 5.33 ಆಗಿದ್ದು ಕೆಲವೊಂದು ಸಂದರ್ಭಗಳಲ್ಲಿ ಈ ಮನೆಗಳು ಅಪರಿಪೂರ್ಣವಾಗಿರುವ ಪರಿಸ್ಥಿತಿಯೂ ಕಂಡುಬಂದಿದೆ. ಇದರ ಜೊತೆಗೆ ಸರಕಾರದಿಂದ ಸಿಗುವ ಆಶ್ರಯ ಯೋಜನೆಯ ಮನೆಗಳನ್ನು ಕಡ್ಡಾಯವಾಗಿ ಆರ್.ಸಿ.ಸಿ ಮಾಡಬೇಕಾಗಿರುವುದರಿಂದ ಇಂದು ಅನೇಕ ಪರವನ್ ಸಮುದಾಯದ ಮನೆಗಳು ಉತ್ತಮ ಸ್ಥಿತಿಯಲ್ಲಿ ನಿರ್ಮಾಣ ಗೊಳ್ಳುತ್ತಿದೆ. ಪರವನ್ ಸಮುದಾಯದ ಜನರಿಗೆ ಸರಕಾರದಿಂದ ವಿಭಿನ್ನ ಯೋಜನೆಗಳ ಮೂಲಕವಾಗಿ ಮನೆ ಕಟ್ಟಲು ಅವಕಾಶಗಳು ಇದ್ದಾಗ್ಯೂ ಕೂಡಾ ಈ ಸೌಲಭ್ಯಗಳನ್ನು ಪಡೆಯುವಲ್ಲಿನ ಕಠಿಣತೆ, ಅಧಿಕಾರಿಗಳ ಭ್ರಷ್ಟಾಚಾರ,ಮತ್ತು ದಾಖಲೆಗಳನ್ನು ನೀಡುವಲ್ಲಿನ ಸಮಸ್ಯೆಗಳಿಂದಾಗಿ ಈ ಯೋಜನೆಗಳು ನಿರೀಕ್ಷಿತ ಸಫಲತೆಯನ್ನು ಸಾಧಿಸಿಲ್ಲ. ಅದೇ ರೀತಿ ಪರವನ್ ಸಮುದಾಯದಲ್ಲಿ ಶೇಕಡಾ 6 ಜನರು ಬಹಳ ಕೆಳಮಟ್ಟದ ಆರ್ಥಿಕ ಪರಿಸ್ಥಿತಿಯನ್ನು ಹೊಂದಿದ್ದು, ಸಿಮೆಂಟ್ ಶೀಟ್ ನಿಂದ ನಿರ್ಮಿಸಿದ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಶೇಕಡಾ 7.67 (23) ಜನರು ಹಂಚು ಮತ್ತು ಶೀಟ್ ಮನೆಗಳಲ್ಲಿ ವಾಸವಾಗಿರುವುದು ಕಂಡು ಬಂದಿದೆ.

ಮನೆಯ ಒಡೆತನ: 300 ಜನ ಮಾಹಿತಿದಾರರಲ್ಲಿ ಸರಿಸುಮಾರು 99 ಶೇಕಡ ಭಾಗದಷ್ಟು ಪರವನ್ ಸಮುದಾಯವರು ಸ್ವಂತ ನಿವೇಶನ ಹೊಂದಿರುವವರು ಆಗಿರುತ್ತಾರೆ. ಇವರುಗಳಲ್ಲಿ ಕೆಲವರು ಸರ್ಕಾರ ಬಡವರಿಗೆ ನಿರ್ಮಿಸಿಕೊಟ್ಟಿರುವ ನಿವೇಶನಗಳಲ್ಲಿ ವಾಸವಾಗಿದ್ದರೆ, ಇನ್ನೂ ಕೆಲವರು ಸರ್ಕಾರ ಕೊಟ್ಟಿರುವ ಜಾಗದಲ್ಲಿ ಗ್ರಾಮಪಂಚಾಯಿತಿ ನೀಡುವ ಸಹಾಯಧನದಿಂದ ನಿವೇಶನ ನಿರ್ಮಿಸಿಕೊಂಡು ವಾಸಮಾಡುವವರು

ಇದ್ದಾರೆ. ಅದೇ ರೀತಿ ಕೆಲವರು ಅಂದರೆ ಕೇವಲ ಶೇಕಡ ಒಂದು ಮಾತ್ರ ಬಾಡಿಗೆ ಮನೆಯಲ್ಲಿ ವಾಸಮಾಡುವವರು ಇದ್ದಾರೆ, ಇನ್ನು ಒಂದು ಶೇಕಡ ಜನರು ತಮ್ಮ ಸಂಬಂಧಿಕರ ಮನೆಯಲ್ಲಿ ವಾಸ ಮಾಡುತ್ತಿರುವಂತದ್ದು ಕೂಡ ಕಂಡು ಬಂದಿದೆ.

ಕುಟುಂಬ ಸದಸ್ಯರ ಉದ್ಯೋಗದ ಬಗೆಗಳು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಪರವನ್ ಸಮುದಾಯದ ಕುಟುಂಬದ ಸದಸ್ಯರುಗಳು ನಿರ್ವಹಿಸುವಂತ ವಿವಿಧ ಬಗೆಯ ಉದ್ಯೋಗಗಳ ಚಿತ್ರಣವನ್ನು ವ್ಯಕ್ತಪಡಿಸುತ್ತದೆ. ಅಧ್ಯಯನದಲ್ಲಿ ಕಂಡು ಬಂದ ಮಾಹಿತಿಯ ಪ್ರಕಾರ ಪರವನ್ ಸಮುದಾಯದವರ ಕುಲಕಸುಬು ದೈವನರ್ತನವಾಗಿದ್ದು 547 ಕುಟುಂಬ ಸದಸ್ಯರಲ್ಲಿ ಶೇಕಡ 4 ರಷ್ಟು ಜನ ತಮ್ಮ ಕುಲಕಸುಬಾದ ದೈವನರ್ತನವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಅಧ್ಯಯನದಲ್ಲಿ ಕಂಡುಬಂದ ಮಾಹಿತಿಯ ಪ್ರಕಾರ ದೈವನರ್ತನದಲ್ಲಿ ತೊಡಗಿರುವವರ ಸಂಖ್ಯೆಯು ಇಳಿಕೆಯಾಗಿದ್ದು ಇದಕ್ಕೆ ಮೂಲ ಕಾರಣ ಆಧುನಿಕ ಶಿಕ್ಷಣದ ಪರಿಣಾಮವೆಂದು ಹೇಳಬಹುದು. ಇದರ ಜೊತೆಗೆ ದೈವನರ್ತಕರಿಗೆ ನೀಡುವ ಅತ್ಯಲ್ಪ ವೇತನ, ದೈವಾರಾಧನೆಯ ಹಂತದಲ್ಲಿ ನಡೆಯುವಂತಹ ಜಾತಿ ತಾರತಮ್ಯ ಕಾರಣವೆಂದು ಹೇಳಬಹುದು. ವಿಶೇಷವಾಗಿ ಗಮನಿಸಬೇಕಾದ ಅಂಶವೆಂದರೆ ದಕ್ಷಿಣ ಕನ್ನಡದ ತುಳುನಾಡಿನಲ್ಲಿ ದೈವಾರಧನೆಯು ವಾರ್ಷಿಕವಾಗಿ ಕೆಲವೇ ಕೆಲವು ತಿಂಗಳುಗಳಲ್ಲಿ ಜರಗುವುದರಿಂದ ಇದನ್ನೇ ಜೀವನ ನಿರ್ವಹಣೆಗಾಗಿ ನಂಬಿಕೊಂಡಿರುವ ನರ್ತಕ ಸಮುದಾಯವು ಉದ್ಯೋಗದ ಸಮಸ್ಯೆಯನ್ನು ಎದುರಿಸುತ್ತಾರೆ. ಹಾಗಾಗಿ ಶಿಕ್ಷಣ ಪಡೆದ ಯುವ ಸಮುದಾಯದ ಜನರು ದೈವ ನರ್ತನವನ್ನು ತೊರೆದು ಇತರ ಉದ್ಯೋಗವನ್ನು ಅರಸಿ ಸ್ವ ಉದ್ಯೋಗ ಅಥವಾ ಬೇರೆ ಊರುಗಳಿಗೆ ಹೋಗುತ್ತಿರುವುದು ಅಧ್ಯಯನದಲ್ಲಿ ಕಂಡುಬಂದಿದೆ. ದೈವನರ್ತಕರು ಮಳೆಗಾಲದ ಸಮಯದಲ್ಲಿ ದೈವ ನರ್ತನದ ಕೆಲಸವಿಲ್ಲದೆ ಕೂಲಿ ಕೆಲಸವನ್ನು ಮಾಡಿ ಜೀವನ ನಿರ್ವಹಿಸುತ್ತಾರೆ. ಆದರೆ ಶಿಕ್ಷಣ ಪಡೆದ ಯುವಜನರು ಕೂಲಿ ಕೆಲಸವನ್ನು ಮಾಡಲು ಹಿಂಜರಿಯುತ್ತಿದ್ದು ಯಾವುದಾದರೊಂದು ಖಾಸಗಿ ಕಂಪೆನಿಯಲ್ಲಿ ಕೆಲಸ ಮಾಡಿಕೊಂಡು ಇರುವುದು ಅಧ್ಯಯನದಲ್ಲಿ ಕಂಡುಬಂದಿದೆ. ಅಧ್ಯಯನದಲ್ಲಿ ಕಂಡುಬಂದ ಮಾಹಿತಿಯ ಪ್ರಕಾರ ಪರವನ್ ಸಮುದಾಯದಲ್ಲಿ ಕೃಷಿ ಭೂಮಿಯನ್ನು ಹೊಂದಿರುವವರ ಸಂಖ್ಯೆ ಬಹಳ

ವಿರಳ ಎಂದು ಹೇಳಬಹುದು ಕೇವಲ 1 ಶೇಕಡ ಜನರು ಮಾತ್ರ ಕೃಷಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪರವನ್ ಸಮುದಾಯದವರು ಅಡಿಕೆ, ತೆಂಗು ಬಾಳೆ, ಭತ್ತ ಮುಂತಾದ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ಮಾಡಿಕೊಂಡು ಬರುತ್ತಿರುವುದು ಕಂಡುಬಂದಿದೆ.

ಪರವನ್ ಸಮುದಾಯದಲ್ಲಿ ಕೃಷಿಯೇತರ ಚಟುವಟಿಕೆಗಳನ್ನು ಮಾಡಿಕೊಂಡು ಬರುತ್ತಿರುವವರು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಕಾಣ ಸಿಗುತ್ತಾರೆ. ಕೃಷಿಯೇತರ ಕೆಲಸಗಳಾದ ಕೂಲಿ, ಬೀಡಿ ಕಟ್ಟುವುದು, ಗಾರೆ ಕೆಲಸ, ತೆಂಗಿನ ಕಾಯಿ ಕೀಳುವುದು, ಗೇರು ಬೀಜ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಶೇಕಡ 26.3 ರಷ್ಟು ಸಮುದಾಯದವರು ಕೃಷಿಯೇತರ ಕೆಲಸಗಳನ್ನು ಮಾಡಿಕೊಂಡು ಬರುವುದು ಅಧ್ಯಯನದಲ್ಲಿ ಕಂಡುಬಂದಿದೆ.

ಇನ್ನೂ ಕೆಲವರು ಅಂದರೆ 547 ಕುಟುಂಬ ಸದಸ್ಯರಲ್ಲಿ 17 ಶೇಕಡದಷ್ಟು ಸದಸ್ಯರು ಖಾಸಗಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವುದು ಕಂಡುಬಂದಿದೆ. ಖಾಸಗಿ ಕಚೇರಿಗಳಲ್ಲಿ ಜವಾನರಾಗಿ ಮತ್ತು ಖಾಸಗಿ ಕಂಪೆನಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದಿದೆ.

ಪರವನ್ ಸಮುದಾಯ ಕೆಲವು ಜನರು ತಮಗೆ ಗೊತ್ತಿರುವ ಕೌಶಲ್ಯದಿಂದ ಸ್ವ ಉದ್ಯೋಗಗಳನ್ನು ನಡೆಸುತ್ತಿರುವುದು ಕೂಡ ಕಂಡು ಬಂದಿದೆ. ಕೆಲವರು ಬೆಡ್ ತಯಾರಿಸುವ ಅಂಗಡಿಗಳನ್ನು ಇಟ್ಟುಕೊಂಡಿದ್ದರೆ, ಇನ್ನೂ ಕೆಲವರು ಸಣ್ಣ ಅಂಗಡಿಗಳನ್ನು ಇಟ್ಟುಕೊಂಡಿರುವುದು ಕಂಡು ಬಂದಿದೆ. ಶೇಕಡ 2.2 ರಷ್ಟು ಕುಟುಂಬ ಸದಸ್ಯರು ಸ್ವ ಉದ್ಯೋಗವನ್ನು ಮಾಡಿಕೊಂಡು ಜೀವನ ನಿರ್ವಹಿಸುತ್ತಿರುವುದು ಕಂಡುಬಂದಿದೆ.

ದೈವನರ್ತಕರಾಗಿ ಪರವನ್ ಸಮುದಾಯ: ಪ್ರಸ್ತುತ ಅಧ್ಯಯನದಲ್ಲಿ ದೊರೆತಿರುವ ಮಾಹಿತಿಯಂತೆ ಪರವನ್ ಸಮುದಾಯದ 300 ಜನ ಮಾಹಿತಿದಾರರಲ್ಲಿ 27.3 ಶೇಕಡದಷ್ಟು ದೈವನರ್ತಕರಿದ್ದು ಅದನ್ನು ಮುಂದುವರಿಸುವವರ ಸಂಖ್ಯೆ ತುಂಬ ಕಡಿಮೆಯಾಗಿದೆ. ದೈವ ನರ್ತಕ ಕುಟುಂಬಗದಲ್ಲಿ ನರ್ತನ ಸೇವೆಯನ್ನು

ಮುಂದುವರಿಸುವವರ ಸಂಖ್ಯೆ ಕೇವಲ 4 ಶೇಕಡ ಮಾತ್ರ ಇರುವುದು ಅಧ್ಯಯನದಲ್ಲಿ ತಿಳಿದು ಬಂದ ಮಾಹಿತಿಯಾಗಿದೆ.

ದೈವ ನರ್ತಕರು ಕಡಿಮೆಯಾಗಲು ಕಾರಣ: ಪರವನ್ ಸಮುದಾಯದ ಕುಲಕಸುಬಾದ ದೈವನರ್ತನವನ್ನು ಯುವಸಮುದಾಯವು ಮುಂದುವರಿಸಿಕೊಂಡು ಹೋಗುವಲ್ಲಿ ವಿಫಲರಾಗಿರುವುದಕ್ಕೆ ಕಾರಣಗಳನ್ನು ಕಲೆಹಾಕಲಾಗಿದೆ ಇದರ ಪ್ರಕಾರ ದೈವನರ್ತನದಲ್ಲಿ ಅಸ್ಪೃಶ್ಯತೆಯ ಕಾರಣವನ್ನು ತಿಳಿಸಿದವರು 7.8 ರಷ್ಟಿದ್ದಾರೆ. ದೈವಾರಧನೆಯು ವರ್ಷದ ಕೆಲವೇ ಕೆಲವು ತಿಂಗಳುಗಳಲ್ಲಿ ಜರಗುವುದರಿಂದ ಬರುವ ಆದಾಯವು ತುಂಬ ಕಡಿಮೆಯಾಗಿರುತ್ತದೆ ಎಂದು ಶೇಕಡ 30.4 ರಷ್ಟು ಮಾಹಿತಿದಾರರು ಅಭಿಪ್ರಾಯ ಪಟ್ಟಿದ್ದಾರೆ. ಶೇಕಡ 44 ರಷ್ಟು ಮಾಹಿತಿದಾರರು ತಮ್ಮ ಅಭಿಪ್ರಾಯ ತಿಳಿಸುತ್ತಾ ದೈವನರ್ತಕರ ಸಂಖ್ಯೆ ಕಡಿಮೆಯಾಗಲು ಯುವಜನರಲ್ಲಿ ದೈವಾರಧನೆಯ ಮೇಲೆ ಇರುವಂತಹ ನಿರುತ್ಸಾಹವೇ ಕಾರಣವೆಂದು ತಿಳಿಸಿದ್ದಾರೆ. ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ ಇಂದಿನ ವಿದ್ಯಾವಂತ ಯುವ ಪೀಳಿಗೆಯವರಲ್ಲಿ ದೈವಾರಧನೆಯ ಮೇಲೆ ನಂಬಿಕೆ ಕಡಿಮೆಯಾಗಿದೆ ಎಂದು ಶೇಕಡಾ 17 ರಷ್ಟು ಮಾಹಿತಿದಾರರು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ.

ದೈವ ನರ್ತನೆಯಲ್ಲಿ ಅನುಭವ: ದೈವನರ್ತನೆ ಪರವನ್ ಸಮುದಾಯದ ಕುಲಕಸುಬಾಗಿದ್ದು ಆಧುನಿಕತೆಯ ಪರಿಣಾಮದ ಹೊರತಾಗಿಯೂ ಅನೇಕ ಹಿರಿಯರು ದೈವನರ್ತನವನ್ನು ಅತ್ಯಂತ ನಿಷ್ಠೆಯಿಂದ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಬಹುತೇಕ ದೈವನರ್ತಕರು ಈ ಕುಲಕಸುಬನ್ನೇ ಕಾಯಕವನ್ನಾಗಿ ಮಾಡಿಕೊಂಡು ಬದುಕು ನಿರ್ವಹಣೆ ಮಾಡುತ್ತಿದ್ದಾರೆ. ಇದರಲ್ಲಿ ಪ್ರಸ್ತುತ ಕೆಲವು ದೈವನರ್ತಕರು 50 ವರ್ಷಕ್ಕಿಂತಲೂ ಹೆಚ್ಚಿನ ಅನುಭವವನ್ನು ದೈವನರ್ತನೆಯಲ್ಲಿ ಹೊಂದಿದ್ದಾರೆ. ದೈವನರ್ತಕರ ವೃತ್ತಿಯ ಅನುಭವದ ಅನ್ವಯ 66 ಶೇಕಡದಷ್ಟು ದೈವನರ್ತಕರು 10 ವರ್ಷಕ್ಕಿಂತಲೂ ಹೆಚ್ಚಿನ ಅನುಭವವನ್ನು

ಹೊಂದಿರುತ್ತಾರೆ. ಶೇಕಡಾ 15 ರಷ್ಟು ದೈವನರ್ತಕರು 5 ರಿಂದ 10 ವರ್ಷದಷ್ಟು ವೃತ್ತಿ ಅನುಭವವನ್ನು ಹೊಂದಿದ್ದೇವೆ ಎಂಬುದಾಗಿ ತಿಳಿಸಿದ್ದಾರೆ.

ದೈವ ನರ್ತನದಲ್ಲಿ ಮಹಿಳೆಯರ ಪಾತ್ರ: ಪರವನ್ ಸಮುದಾಯದ ಬಹುತೇಕ 92 ಶೇಕಡದಷ್ಟು ಮಹಿಳೆಯರು ತಾವು ದೈವನರ್ತನದ ಯಾವುದೇ ಕ್ರಿಯಾ ವಿಧಾನಗಳಲ್ಲಿ ತಮ್ಮ ಮನೆಯವರ ಜೊತೆ ಭಾಗವಹಿಸುವುದಿಲ್ಲ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇದರ ಬಗ್ಗೆ ಕಾರಣವನ್ನು ಕೇಳಿದಾಗ ಪರವನ್ ಸಮುದಾಯದ ಮಹಿಳೆಯರು ಅನೇಕ ಭಿನ್ನ ಅಭಿಪ್ರಾಯಗಳನ್ನು ನೀಡುತ್ತಾರೆ. ಕೆಲವು ಸಂದರ್ಭಗಳಲ್ಲಿ ನರ್ತನ ಸೇವೆಯು ರಾತ್ರಿ ಆರಂಭವಾಗಿ ಬೆಳಗ್ಗಿನ ಜಾವದವರೆಗೆ ನಡೆಯುತ್ತವೆ, ಅಂತಹ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಅಥವಾ ಮಹಿಳೆಯರು ನಿದ್ದೆ ಇಲ್ಲದೆ, ನಿದ್ರಿಸಲು ಸರಿಯಾದ ವ್ಯವಸ್ಥೆ ಇಲ್ಲದೆ ಸಮಯವನ್ನು ಕಳೆಯಬೆಕಾಗುತ್ತದೆ. ಆದುದರಿಂದ ದೈವ ನರ್ತಕರು ತಮ್ಮ ಜೊತೆ ಮನೆಯ ಹೆಣ್ಣು ಮಕ್ಕಳನ್ನು ಅಥವಾ ಮಹಿಳೆಯರನ್ನು ಕರೆದುಕೊಂಡು ಹೋಗಲು ಹಿಂಜರಿಯುತ್ತಾರೆ ಎಂದು ಅಧ್ಯಯನದಲ್ಲಿ ತಿಳಿದು ಬಂದಿದೆ. ದೈವನರ್ತಕರಿಗೆ ಸಹಾಯಕರಾಗಿ ತೊಡಗಿಕೊಂಡ ಮಹಿಳೆಯರಲ್ಲಿ ಕೇವಲ 8 ಶೇಕಡದಷ್ಟು ಮಹಿಳೆಯರು ಮಾತ್ರ ತಾವು ತಮ್ಮ ಮನೆಯ ದೈವನರ್ತಕ ಪುರುಷರ ಜೊತೆ ದೈವ ನರ್ತನದ ಸಮಯದಲ್ಲಿ ಪಾರ್ದನ ಹೇಳುವುದು, ಅಲಂಕಾರಕ್ಕೆ ಸಹಾಯ ಮಾಡುವುದು, ತೆಂಗಿನ ಗರಿಗಳನ್ನು ದೈವ ನರ್ತನಕ್ಕೆ ಬೇಕಾದ ರೀತಿಯಲ್ಲಿ ತಯಾರಿಸಿ ಕೊಡುವಂತಹ ಕೆಲಸಗಳಲ್ಲಿ ಮಹಿಳೆಯರು ತೊಡಗಿಕೊಂಡಿರುವುದಾಗಿ ತಿಳಿಸಿರುತ್ತಾರೆ.

ದೈವ ನರ್ತನೆಯಿಂದ ಸ್ಥಾನಮಾನದಲ್ಲಿ ಬದಲಾವಣೆಯ ವಿಧ: ಪರವನ್ ಸಮುದಾಯದ ದೈವರ್ತಕರನ್ನು ವಿಚಾರಿಸಿದಾಗ ಸರಿಸುಮಾರು ಶೇಕಡ 90.2 ಜನ ಮಾಹಿತಿದಾರರು ಹೌದು ನಮಗೆ ದೈವ ನರ್ತನ ಉದ್ಯೋಗವು ಖುಷಿ ತಂದಿದೆ ಎಂಬುದಾಗಿ ಉತ್ತರಿಸಿದರೆ, ಇನ್ನು ಕೆಲವೇ ಕೆಲವು ಮಂದಿ 9.8 ಕುಟುಂಬಗಳು ಮಾತ್ರ ನಮಗೆ ಖುಷಿ ತಂದಿಲ್ಲ. ಯಾಕೆಂದರೆ ನಾವು ದೈವನರ್ತಕರಾಗಿದ್ದರೂ ನಮ್ಮನ್ನು ಇನ್ನೂ ಅಸ್ಪ್ರಶ್ಯರಂತೆ ನೋಡುತ್ತಾರೆ, ನಡೆಸಿಕೊಳ್ಳುತ್ತಾರೆ. ಇನ್ನು ಕೆಲವು ದೈವ ನರ್ತಕರು ಸಂತೋಷ ಇದೆ ಬೇಸರವೂ

ಇದೆ ಎಂದು ತಮ್ಮ ಅಭಿಪ್ರಾಯ ಹೇಳುತ್ತಾರೆ. ದೈವ ನರ್ತಕರಿಗೆ ಸಮಾಜದಲ್ಲಿ ಒಳ್ಳೆಯ ಗೌರವ ,ಸ್ಥಾನಮಾನ ದೊರಕುತ್ತದೆ. ಆದರೆ ಅವರಿಗೆ ಸಿಗುವಂತಹ ವೇತನ ತಾರತಮ್ಯಕ್ಕಾಗಿ ಬೇಸರ ವ್ಯಕ್ತಪಡಿಸುತ್ತಾರೆ. ಅಧ್ಯಯನದಲ್ಲಿ ದೊರಕಿದ ಮಾಹಿತಿಯ ಪ್ರಕಾರ ದೈವನರ್ತಕರಿಗೆ ಕುಟುಂಬದಲ್ಲಿ ಹಾಗೂ ಸಮುದಾಯದ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಗೌರವ ದೊರಕುತ್ತದೆ. ಸುಮಾರು 32 ಶೇಕಡದಷ್ಟು ದೈವ ನರ್ತಕರು ತಮ್ಮನ್ನು ಕುಟುಂಬದಲ್ಲಿ ಒಳ್ಳೆಯ ಗೌರವದಿಂದ ಕಾಣುತ್ತಾರೆ ಎಂಬ ಅಭಿಪ್ರಾಯವನ್ನು ತಿಳಿಸುತ್ತಾರೆ.

ದೈವ ನರ್ತನದಲ್ಲಿ ಸಿಗುವ ಆದಾಯದಲ್ಲಿ ಕುಟುಂಬ ನಿರ್ವಹಣೆ: ತುಳುನಾಡಿನಲ್ಲಿ ದೈವನರ್ತನವು ನಿಯಮಿತವಾಗಿ ಕೆಲವೇ ತಿಂಗಳಲ್ಲಿ ಜರಗುವ ಕಾರಣ ಇದರಿಂದ ಬರುವ ಆದಾಯ ಕುಟುಂಬ ನಿರ್ವಹಣೆಗೆ ಸಾಕಾಗುವುದಿಲ್ಲ ಎಂದು ಪ್ರತಿಕ್ರಿಯಿಸುತ್ತಾರೆ. 81% ರಷ್ಟು ಮಾಹಿತಿದಾರರು ಈ ರೀತಿಯಾಗಿ ಅಭಿಪ್ರಾಯ ಪಡುತ್ತಾರೆ. ದೈವ ನರ್ತನ ಸೇವೆಯನ್ನು ಹೆಚ್ಚಿನ ಪರವನ್ ಸಮುದಾಯದ ಜನರು ಭಕ್ತಿಯಿಂದ ಮಾಡುವುದಾಗಿ ತಿಳಿಸಿರುತ್ತಾರೆ. ಇದಲ್ಲದೆ ದೈವನರ್ತನದಿಂದ ಬಂದ ಆದಾಯವು ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ ಎಂಬ ಅಭಿಪ್ರಾಯ ಹೇಳುತ್ತಾರೆ.

ಉಳಿತಾಯದ ಬಗೆಗಳು: ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದ ಜನರು ಹೊಂದಿರುವ ವಿವಿಧ ರೀತಿಯ ಉಳಿತಾಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಪರವನ್ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀ ಶಕ್ತಿ ಯೋಜನೆಯಲ್ಲಿ ಜೀವವಿಮೆಯನ್ನು ಹೊಂದಿದವರು ಅಗಿದ್ದಾರೆ. ಸರಿಸುಮಾರು 300 ಜನ ಮಾಹಿತಿದಾರರಲ್ಲಿ ಶೇಕಡಾ 45 ಜನ ಮಾಹಿತಿದಾರರು ಜೀವವಿಮೆ ಪಾಲಿಸಿಗಳನ್ನು ಹೊಂದಿದ್ದೇವೆ ಎಂಬುದಾಗಿ ತಿಳಿಸಿರುತ್ತಾರೆ. ಈ ಪಾಲಿಸಿಯನ್ನು ಮಾಡುವ ಮೂಲಕ ತಮ್ಮ ಹಣ್ದ ಸ್ವಲ್ಪ ಭಾಗವನ್ನು ಉಳಿತಾಯದಲ್ಲಿ ವಿನಿಯೋಗಿಸಿರುತ್ತಾರೆ ಎಂಬುದು ತಿಳಿದುಬಂದಿದೆ. ಇವರುಗಳಲ್ಲಿ ಕೆಲವರು ಬಹಳ ಕಷ್ಟದಿಂದ ಮುಂದುವರಿಸುತ್ತಿದ್ದರೆ, ಇನ್ನೂ ಕೆಲವರು ಕಟ್ಟಲು ಸಾದ್ಯವಾಗದೆ ಅರ್ಧದಲ್ಲೇ ನಿಲ್ಲಿಸಿರುತ್ತಾರೆ ಎಂಬ ಮಾಹಿತಿ ಕೂಡ ತಿಳಿದು ಬಂದಿದೆ. ಮಾಹಿತಿದಾರರ

ಅಭಿಪ್ರಾಯದಂತೆ ಸ್ವ ಸಹಾಯ ಸಂಘಗಳಿಂದಾಗಿ ನಮ್ಮ ದುಡಿಮೆಯ ಸಣ್ಣ ಒಂದು ಪಾಲು ಉಳಿತಾಯವಾಗಿ ಸಂಗ್ರಹವಾಗುವುದು ನಮಗೆ ತೃಪ್ತಿ ನೀಡಿದೆ ಎಂಬ ಅಭಿಪ್ರಾಯ ನೀಡುತ್ತಾರೆ.

ಇನ್ನೂ ಕೆಲವರು ಅಂದರೆ ಅದರಲ್ಲೂ ಮಹಿಳೆಯರು ಶೇಕಡಾ 57 ಜನರು ವಿವಿಧ ಸ್ವ-ಸಹಾಯ ಗುಂಪುಗಳಲ್ಲಿ ಸದಸ್ಯರಾಗಿರುವುದು ಕಂಡು ಬಂದಿದೆ. ಆ ಸ್ವ ಸಹಾಯ ಸಂಘಗಳಲ್ಲಿ ವಾರಕ್ಕೆ ಇಂತಿಷ್ಟು ಹಣವನ್ನು ಉಳಿತಾಯವಾಗಿ ಕಟ್ಟುತ್ತಿರುವುದು ಕಂಡು ಬಂದಿದೆ. ಇದರಲ್ಲಿ ಪುರುಷರ ಸಂಘಗಳಿಗಿಂತಲೂ ಮಹಿಳೆಯರ ಸಂಘಗಳು ಹೆಚ್ಚಾಗಿದ್ದು, ನವೋದಯ ಧರ್ಮಸ್ಥಳ ಸ್ತ್ರೀಶಕ್ತಿ ಸಂಘಗಳು, ಸ್ವ-ಸಹಾಯ ಸಂಘ ಮೊದಲಾದ ಸಂಘಗಳಲ್ಲಿ ಸೇರ್ಪಡೆಗೊಂಡು ಉಳಿತಾಯ ಮತ್ತು ಸಾಲ ಪಡೆಯುವ ಕಾರ್ಯವನ್ನು ಇಟ್ಟುಕೊಂಡಿದ್ದಾರೆ. ಶೇಕಡಾ 38.25 ಜನರು ವಿವಿಧ ಬ್ಯಾಂಕುಗಳಲ್ಲಿ ನಿಖರ ಠೇವಣಿ,ಉಳಿತಾಯ ಖಾತೆಗಳನ್ನು ತೆರೆಯುವ ಮೂಲಕ ಉಳಿತಾಯ ವನ್ನು ಮಾಡುತ್ತಾರೆ. ಶೇಕಡಾ 34 ಜನರು ತಮ್ಮ ಹತ್ತಿರದ ಅಂಚೆಕಛೇರಿಗಳಲ್ಲಿ ಉಳಿತಾಯ ಯೋಜನೆಗಳಿಗೆ ಸೇರುವ ಮೂಲಕ ಉಳಿತಾಯ ಪ್ರಕ್ರಿಯೆಯಲ್ಲಿ ಭಾಗಿಗಳಾದರೆ ಶೇಕಡಾ 5 ಜನರು ಸ್ಥಳೀಯವಾಗಿ ಜನರು ಸೇರಿಕೊಂಡು ಮಾಡುವ ಚೀಟಿ ವ್ಯವಹಾರ,(ಕುರಿ/ಕುದಿ/ನರ್ತೆ) ಮೊದಲಾದುವುಗಳಲ್ಲಿ ಹಣ ವಿನಿಯೋಗಿಸುವ ಮೂಲಕ ತಮ್ಮ ಕಷ್ಟಕಾಲಕ್ಕೆ ಅವುಗಳು ನೆರವಾಗಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಈ ರೀತಿ ಜವಾಬ್ದಾರಿಯನ್ನು ತೆಗೆದುಕೊಂಡ ವ್ಯಕ್ತಿಗಳು ವಿಶ್ವಾಸಕ್ಕೆ ಅರ್ಹರಾಗಿಲ್ಲದೇ ಇದ್ದ ಸಂದರ್ಭದಲ್ಲಿ ಹಣ ವಿನಿಯೋಗಿಸಿದ ವ್ಯಕ್ತಿಗಳಿಗೆ ಮೋಸವಾದ ಹಲವು ಉದಾಹರಣೆಗಳನ್ನು ಕ್ಷೇತ್ರಕಾರ್ಯ ಸಮಯದಲ್ಲಿ ಸಂಶೋಧಕರು ಗುರುತಿಸಿದ್ದಾರೆ.

ಸಾಲದ ವಿವರ: 300 ಜನ ಮಾಹಿತಿದಾರರಲ್ಲಿ ಪರವನ್ ಸಮುದಾಯದ ಹೆಚ್ಚಿನ ಜನರು ಮನೆ ಕಟ್ಟುವುದಕ್ಕೆ, ಹಳೆ ಮನೆಯನ್ನು ರಿಪೇರಿ ಮಾಡುವುದಕ್ಕೆ ಸಾಲವನ್ನು ತೆಗೆದುಕೊಂಡಿರುವವರೇ ಜಾಸ್ತಿ, ಒಟ್ಟಿನಲ್ಲಿ ಮಾಹಿತಿದಾರರಲ್ಲಿ ಶೇಕಡ 43 ಜನ ಮಾಹಿತಿದಾರರು ಆಗಿರುತ್ತಾರೆ. ಪ್ರಸ್ತುತ ಸಮಾಜದಲ್ಲಿ ಒಂದು ಉತ್ತಮವಾದ ಮನೆಯನ್ನು ಹೊಂದುವಂತಹುದು ಎಲ್ಲರ ಕನಸಾಗಿದ್ದು ಇದಕ್ಕಾಗಿ ಹಲವು ಬ್ಯಾಂಕುಗಳಿಂದ

ಸಾಲ ಸೌಲಭ್ಯವು ದೊರೆಯುವುದು, ಅಲ್ಲದೆ ಪರವನ್ ಸಮುದಾಯಕ್ಕೆ ಪಂಚಾಯತ್ ರಾಜ್ ಇಲಾಖೆಯಿಂದ ಮನೆ ನಿರ್ಮಾಣದ ಅವಕಾಶಗಳು ಕೂಡಾ ದೊರಕುತ್ತಿದ್ದು, ಬಡ ಜನರ ಸ್ವಂತ ಮನೆಯನ್ನು ಹೊಂದುವ ಕನಸಿಗೆ ಸಹಾಯವನ್ನಿತ್ತಿದೆ. ಶೇಕಡಾ 18.50 ಸಾಲವು ತಮ್ಮ ಮಕ್ಕಳಿಗೆ ವಿವಾಹ ನಡೆಸಲು ಮಾಡಿದ ಸಾಲವಾಗಿದ್ದು, ಶೇಕಡಾ 8.75 ತಮ್ಮ ಮಕ್ಕಳ ಶಿಕ್ಷಣ ಅಥವಾ ವಿದ್ಯಾಭ್ಯಾಸದ ಸಲುವಾಗಿ ಮಾಡಿರುವ ಸಾಲವಾಗಿದೆ. ಪರವನ್‌ರಲ್ಲಿ ಅನೇಕರು ಬಡವರಾಗಿದ್ದು, ಹೆಚ್ಚಿನ ಶಿಕ್ಷಣವನ್ನು ಪಡೆಯಲು ಆರ್ಥಿಕ ವಾಗಿ ಬೆಂಬಲ ಕೊಡುವ ಸಾಧ್ಯವಿಲ್ಲದಿದ್ದಾಗ ಉತ್ತಮ ಶಿಕ್ಷಣವನ್ನು ಪಡೆಯಲು ಅಸಾಧ್ಯವಾದಂತಹ ಪರಿಸ್ಥಿಯು ನಿರ್ಮಾಣವಾಗಿ ಅಪೇಕ್ಷಿತ ಶಿಕ್ಷಣದ ಬದಲು ಸಾಲಸಿಗುವ ಪ್ರಮಾಣವನ್ನು ಅನುಸರಿಸಿ ಶಿಕ್ಷಣವನ್ನು ಪಡೆಯಲಾಗುತ್ತದೆ. ಶೇಕಡಾ 8.25 ಜನರು ಸ್ವಂತ ವಾಹನವನ್ನು ಹೊಂದುವ ಉದ್ದೇಶದಿಂದ ಸಾಲವನ್ನು ಪಡೆದಿದ್ದು, ಆಧುನಿಕ ಉದ್ಯೋಗಗಳನ್ನು ನಡೆಸುವ ಯುವ ಸಮುದಾಯದ ಜನರಿಗೆ ತಮ್ಮ ವಾಸ ಸ್ಥಾನಗಳಿಗೆ ಬೇಕಾದ ಸಮಯದಲ್ಲಿ ಸಾರಿಗೆ ಸಂಪರ್ಕವಿಲ್ಲದಿರುವ ಸಮಯದಲ್ಲಿ ದ್ವಿಚಕ್ರ ವಾಹನ ಅನಿವಾರ್ಯ ಎಂಬ ಕಾರಣದಿಂದ ಈ ಸಾಲದ ಪ್ರಮಾಣವನ್ನು ಗುರುತಿಸಬಹುದು. ಶೇಕಡಾ 7.25 ಜನರು ಸಣ್ಣಪುಟ್ಟ ವ್ಯಾಪಾರ ವಹಿವಾಟಿಗಳಿಗಾಗಿ ಸಾಲವನ್ನು ಪಡೆದಿದ್ದು, ಶೇಕಡಾ 3.50 ಜನರು ಆರೋಗ್ಯ ಸುಧಾರಣೆಗಾಗಿ ಸಾಲವನ್ನು ಮಾಡಿರುತ್ತಾರೆ, ಕೆಲವೊಂದು ತುರ್ತು ಸಂದರ್ಭದ ಚಿಕಿತ್ಸೆಗಳಿಗೆ ತುತ್ತಾದಂತಹ ಸಂದರ್ಭದಲ್ಲಿ ನಗರ ಪ್ರದೇಶಗಳ ಖಾಸಗೀ ಆಸ್ಪತ್ರೆಗಳಲ್ಲಿ ಮಾತ್ರ ಉತ್ತಮ ಚಿಕಿತ್ಸೆಯು ದೊರೆಯುವ ಕಾರಣದಿಂದಾಗಿ ಈ ಸಾಲದ ಪ್ರಮಾಣ ಏರಿಕೆಯಾಗಿದೆ ಇದಕ್ಕಾಗಿ ತಮ್ಮಲ್ಲಿರುವ ಚಿನ್ನವನ್ನು ಅಡವಿಟ್ಟು ಸಾಲ ಪಡೆದವರ ಪ್ರಮಾಣವು 2.75 ಶೇಕಡಾ ಇದ್ದು,ಕಡೆಗೆ ಸಾಲವನ್ನು ತೀರಿಸಲಾಗದೆ ಇವುಗಳನ್ನು ಕಳೆದುಕೊಂಡ ಹಲವು ಉದಾಹರಣೆಗಳು ಕ್ಷೇತ್ರ ಕಾರ್ಯ ಸಮೀಕ್ಷೆಯಲ್ಲಿ ಬಹಿರಂಗಗೊಂಡಿದೆ.

ಮನೆಯ ಮೂಲ ಭೂತ ಸೌಕರ್ಯಗಳು: ಶುದ್ಧ ಕುಡಿಯುವ ನೀರು– 300 ಜನ ಮಾಹಿತಿದಾರರಲ್ಲಿ ಸರಿಸುಮಾರು ಶೇಕಡ 21.25 ಪರವನ್ ಮಾಹಿತಿದಾರರು ನಮಗೆ ವರ್ಷಂಪೂರ್ತಿ ನೀರಿನ ಸಮಸ್ಯೆ ಇದೆ

ಎಂದು ಹೇಳಿದರೆ, ಇನ್ನೂ ಕೆಲವರು ನಾವು ಇರುವ ಜಾಗದಲ್ಲಿ ಪೈಪ್ ಲೈನ್ ಕನೆಕ್ಷನ್ ಇಲ್ಲ, ಆದುದರಿಂದ ಪ್ರತೀ ದಿನ ಬೇರೆಯವರ ಬಾವಿಯಲ್ಲಿ ನೀರನ್ನು ಕೇಳಿ ಪಡೆಯುವುದೇ ನಮ್ಮ ಕಾಯಕ ಎಂಬುದಾಗಿ ಹೇಳಿರುತ್ತಾರೆ. **ಶೌಚಾಲಯ–**ಅಧ್ಯಯನದ ಮಾಹಿತಿಯ ಪ್ರಕಾರ 300 ಜನ ಮಾಹಿತಿದಾರರಲ್ಲಿ ಸರಿಸುಮಾರು 20.33 ಶೇಕಡ ಪರವನ್ ಸಮುದಾಯದವರು ಆರ್ಥಿಕವಾಗಿ ಸಾಮಾಜಿಕವಾಗಿ ಉತ್ತಮ ಸ್ಥಿತಿಯಲ್ಲಿ ಇರುವವರು ಉತ್ತಮ ರೀತಿಯ ಶೌಚಾಲಯವನ್ನು ಹೊಂದಿದ್ದಾರೆ ಎಂಬುದು ತಿಳಿದುಬಂದಿರುವ ಮಾಹಿತಿ, ಇನ್ನೂ ಕೆಲವರು ಅಂದರೆ ಮಧ್ಯಮ ವರ್ಗದ ಜನರು ಯಾರು ಅಲ್ಪ ಸ್ವಲ್ಪ ದುಡಿದುಕೊಂಡು ಜೀವನ ಸಾಗಿಸುತ್ತಿರುತ್ತಾರೆಯೋ ಅಂತವರು ಸಾಧಾರಣ ಮಟ್ಟದ ಶೌಚಾಲಯವನ್ನು ಹೊಂದಿರುವುದು (76.67) ತಿಳಿದುಬಂದಿದೆ, ಕೊನೆಯದಾಗಿ ಕೆಲವೊಂದು (3%) ಜನರು ಅದರಲ್ಲೂ ಅತ್ಯಂತ ಆರ್ಥಿಕವಾಗಿ ಶೋಚನೀಯ ಸ್ಥಿತಿಯಲ್ಲಿ ಇರುವವರು ಶೌಚಾಲಯದ ಸರಿಯಾದ ವ್ಯವಸ್ಥೆಗಳು ಇಲ್ಲದೆ ಬಯಲು ಪ್ರದೇಶಕ್ಕೆ ಹೋಗುವುದಾಗಿ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

ಸರಕಾರಿ ಯೋಜನೆಗಳ ಮಾಹಿತಿಯ ಮೂಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಪರವನ್ ಸಮುದಾಯದ ಜನರು ಸರಕಾರದಿಂದ ಲಭ್ಯವಿರುವ ಕೆಲವೊಂದು ಯೋಜನೆಗಳ ಬಳಕೆಯ ಬಗ್ಗೆ ಮಾಹಿತಿಯನ್ನು ಸಂಗಹಿಸಲಾಗಿದೆ. ಮೇಲೆ ತಿಳಿಸಿದ ಎಲ್ಲಾ ಸರಕಾರೀ ಯೋಜನೆಗಳ ಪ್ರಸಾರಕ್ಕಾಗಿ ಸರಕಾರೀ ಪ್ರಾಯೋಜಿತ ವಾರ್ತಾಇಲಾಖೆ ಇದ್ದು ಅದರ ಜೊತೆಗೆ ಹಲವು ಮಾಧ್ಯಮಗಳಿಂದಲೂ ಈ ಯೋಜನೆಗಳ ಬಗ್ಗೆ ಮಾಹಿತಿ ನೀಡಿದ್ದಾಗ್ಯೂ ತಿಳಿಸಿರುತ್ತಾರೆ. ಆದರೆ ಮತ್ತೊಂದು ಪ್ರಮುಖವಾದ ತಿಳಿದು ಬಂದ ವಿಷಯವೇನೆಂದರೆ ಪರವನ್ ಸಮುದಾಯದ ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಕೂಲಿ ಮಾಡಿಕೊಂಡು ಬದುಕುತ್ತಿರುವ ಅದೆಷ್ಟೋ ಕುಟುಂಬಗಳಿಗೆ ಲಭ್ಯವಿರುವ ಯಾವುದೇ ಒಂದು ಯೋಜನೆಯೂ ಸಂಪೂರ್ಣವಾಗಿ ಸಫಲವಾಗಿ ಅನುಷ್ಠಾನವಾಗಿಲ್ಲ ಎಂಬುದು ಪ್ರತಿಯೊಬ್ಬ ಪರವನ್ ಸಮುದಾಯದವರ ಕೂಗು.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ 300 ಜನ ಮಾಹಿತಿದಾರರಲ್ಲಿ ಸರಿಸುಮಾರು ಶೇಕಡಾ 67.50 ಜನರು ಸರ್ಕಾರದಲ್ಲಿ ಲಭ್ಯವಿರುವ ಯೋಜನೆಗಳ ಬಗ್ಗೆ ರೇಡಿಯೋ, ಟಿ.ವಿ., ದಿನಪತ್ರಿಕೆಗಳು, ವಾರ ಪತ್ರಿಕೆಗಳು, ಮಾಸ ಪತ್ರಿಕೆಗಳು, ಮೊದಲಾದುವುಗಳನ್ನು ಬಳಸಿಕೊಂಡು ತಿಳಿದುಕೊಡಿರುತ್ತೇವೆ ಎಂಬುದಾಗಿ ತಿಳಿಸಿರುತ್ತಾರೆ. ಈ ಎಲ್ಲಾ ಮಾಧ್ಯಮಗಳಿಗಿಂತಲೂ ಅತ್ಯಂತ ಪ್ರಬಲವಾದದ್ದು ಟಿವಿ ಮಾಧ್ಯಮ ಎಂದು ಹೇಳಬಹುದು, ಅದರಲ್ಲೂ ಇವತ್ತಿನ ಯುವ ಜನಾಂಗಕ್ಕೆ ದಿನಪತ್ರಿಕೆ ಮತ್ತು ಟಿವಿಗಳ ಪಾತ್ರವು ಬಹಳ ಪ್ರಮುಖವಾದದ್ದು ಇವುಗಳಿಂದ ಮಾಹಿತಿ ಪ್ರಸಾರವು ಪರಿಣಾಮಕಾರಿಯಾಗಿ ನಡೆದಿದೆ ಎಂಬುದಾಗಿ ತಿಳಿದುಕೊಳ್ಳಬಹುದು. ಇನ್ನುಳಿದ ಶೇಕಡಾ 28.75 ಜನರು ತಿಳಿಸಿರುವಂತೆ ಮೇಲೆ ತಿಳಿಸಿದ ಯೋಜನೆಗಳ ಬಗ್ಗೆ ಮಾಹಿತಿಯನ್ನು ಪಂಚಾಯತ್ ವ್ಯವಸ್ಥೆಯ ವಿವಿಧ ಸ್ತರದ ಅಧಿಕಾರಿಗಳಿಂದ ಪಡೆದುದಾಗಿ ತಿಳಿಸಿರುತ್ತಾರೆ.

ಕೆಲವರು ತಿಳಿಸಿದ ಪ್ರಕಾರ ಸರ್ಕಾರಿ ಅಧಿಕಾರಿಗಳಿಂದ ಈ ಯೋಜನೆಗಳ ಬಗ್ಗೆ ಸರಿಯಾದ ಪ್ರಸಾರ ಆಗಿಲ್ಲ ಎಂಬುದು ತಿಳಿದು ಬಂದಿದೆ. ಮತ್ತು ಈ ಎಲ್ಲಾ ಯೋಜನೆಗಳ ಪರಿಣಾಮಕಾರಿ ಅನುಷ್ಟಾನಕ್ಕೆ ಮತ್ತು ಯೋಗ್ಯ ಫಲಾನುಭವಿಯ ಆಯ್ಕೆಗೆ ನಿರ್ಧಿಷ್ಟ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡಿದಾಗ ಮಾತ್ರ ಯಾವುದೇ ಯೋಜನೆ ಭ್ರಷ್ಟಾಚಾರ ರಹಿತವಾಗಿ ನಿಜವಾಗಿ ಸಲ್ಲಬೇಕಾದ ವ್ಯಕ್ತಿಗೆ ಸಲ್ಲುವುದು. ಶೇಕಡಾ 21 ಜನರು ಹಲವು ಯೋಜನೆಗಳನ್ನು ತಮ್ಮ ಸಹಪಾಟಿಗಳಿಂದ ಅಥವಾ ಹತ್ತಿರದ ಸ್ನೇಹಿತರಿಂದ ತಿಳಿದುಕೊಂಡಿರುವುದಾಗಿ ತಿಳಿಸಿದ್ದು, ಇಲ್ಲಿ ಶಿಕ್ಷಣವನ್ನು ಮುಖ್ಯ ವಿಚಾರವಾಗಿ ಪರಿಗಣಿಸಲಾಗುತ್ತದೆ. ಶಿಕ್ಷಣ ಪಡೆದ ಸ್ನೇಹಿತರಿದ್ದ ಸಂದರ್ಭದಲ್ಲಿ ಹೆಚ್ಚಿನ ಯೋಜನೆಗಳ ಬಗ್ಗೆ ಮಾಹಿತಿಯನ್ನು ವಿವಿಧ ಮೂಲಗಳಿಂದ ಪಡೆಯುವ ಸಾಧ್ಯತೆಗಳು ಅಧಿಕವಾಗಿರುತ್ತದೆ. ಶೇಕಡಾ 8 ಜನರು ಅಭಿಪ್ರಾಯ ತಿಳಿಸಿದಂತೆ ಯೋಜನೆಗಳ ಬಗ್ಗೆ ತನ್ನ ಸಂಬಂಧಿಕರಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.ಆದರೆ ಹೆಚ್ಚಿನ ಸಂದರ್ಭಗಳಲ್ಲಿ ತಾನು ನಿರ್ದಿಷ್ಟ ಯೋಜನೆಯ ಫಲಾನುಭವಿಯಾದ ಸಂದರ್ಭದಲ್ಲಿ ಮಾತ್ರ ತನ್ನ ಸಂಬಂಧಿಕರಿಗೆ ಮಾಹಿತಿಯನ್ನು ನೀಡಬಹುದೇ ಹೊರತು ಎಲ್ಲಾ ಯೋಜನೆಗಳ ಬಗ್ಗೆ ಮಾಹಿತಿ ಸಿಗಲಾರದು.

ಮನೆ ಬಳಕೆಯ ಆಧುನಿಕ ಸವಲತ್ತುಗಳ ವಿವರ ಇವತ್ತಿನ ಆಧುನಿಕ ಪ್ರಪಂಚದಲ್ಲಿ, ಅದರಲ್ಲೂ ದಕ್ಷಿಣಕನ್ನಡದಂತಹ ಅತೀ ಹೆಚ್ಚು ಶಿಕ್ಷಿತರನ್ನು ಹೊಂದಿರುವ, ಅತ್ಯಂತ ಆಧುನಿಕತೆಗೆ ಒಳಗಾಗಿರುವಂತ ಜಿಲ್ಲೆಯಲ್ಲಿ ವಾಸಿಸುವಾಗ, ಟೀವಿ, ಫೋನು, ಬೈಕು, ಸ್ಕೂಟರ್ ಬಳಸುವುದು ಒಬ್ಬ ಸಾಮಾನ್ಯ ಮನುಷ್ಯನ ಸಹಜ ಜನಜೀವನ ಎಂದೇ ಹೇಳಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಜನರು ಅತ್ಯಾಧುನಿಕವಾದ ಜೀವನ ಶೈಲಿಯಲ್ಲಿ ಬದುಕುತ್ತಿದ್ದಾರೆ ಎಂದು ಹೇಳಬಹುದು. ಇದಕ್ಕೆ ಅನುಗುಣವಾಗಿ ಜಿಲ್ಲೆಯ ಪ್ರತಿ ಮನೆಯಲ್ಲಿಯೂ ಆಧುನಿಕ ಸವಲತ್ತುಗಳಾದ ಟಿವಿ, ಮಿಕ್ಸಿ, ಮೊಬೈಲ್, ಫ್ಯಾನ್, ಇಸ್ತ್ರಿ ಪೆಟ್ಟಿಗೆ ಮತ್ತು ಗ್ಯಾಸ್ ಸ್ಟವ್ ಗಳನ್ನು ಉಪಯೋಗಿಸುತ್ತಿರುವುದನ್ನು ಕಾಣಬಹುದು. ಆದರೆ ಫ್ರಿಡ್ಜ್, ಮತ್ತು ಕಾರು ಇರುವವರ ಸಂಖ್ಯೆ ಕಡಿಮೆ ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಇದೆ ಎಂದು ಹೇಳಬಹುದು.

ಪರವನ್ ಸಮುದಾಯದ ಮಾಸಿಕ ಖರ್ಚು ವೆಚ್ಚ: ಪರವನ್ ಸಮುದಾಯದವರು ತಮ್ಮ ಆದಾಯದ 40% ದಷ್ಟು ವೆಚ್ಚವನ್ನು ಆಹಾರ ಮತ್ತು ಬಟ್ಟೆ ಖರೀದಿಗಾಗಿ ವ್ಯಯ ಮಾಡುತ್ತಾರೆ. 15% ದಷ್ಟು ವೆಚ್ಚವನು ಶಿಕ್ಷಣಕ್ಕಾಗಿ, ವೈದ್ಯಕೀಯ ವೆಚ್ಚಕ್ಕಾಗಿ ತಮ್ಮ ಆದಾಯದ 10% ದಷ್ಟು ಹಣವನ್ನು ವಿನಿಯೋಗಿಸುತ್ತರೆ. ಇನ್ನು ಕುಟುಂಬಗಳಲ್ಲಿ ಅಥವಾ ತಮ್ಮ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳಿದ್ದರೆ ಅದಕ್ಕೆ 17% ದಷ್ಟು ಖರ್ಚನ್ನು ಮಾಡುತ್ತೇವೆ ಎಂಬುದಾಗಿ ತಿಳಿಸಿದ್ದಾರೆ.

ಪರವನ್ ಸಮುದಾಯದವರ ಮಾಸಿಕ ಖರ್ಚು ವೆಚ್ಚಗಳ ಬಗ್ಗೆ ಮಾಹಿತಿ ತಿಳಿದುಕೊಂಡಾಗ ಇತರ ಜಾತಿ ಸಮುದಾಯಗಳಂತೆ ಹಬ್ಬ ಹರಿದಿನಗಳಿಗೆ ಹೊಸ ಬಟ್ಟೆ ಬರೆಗಳನ್ನು ಖರೀದಿಸುವ ಹವ್ಯಾಸ ಹೊಂದಿದ್ದಾರೆ. ಬಹುತೇಕ ಮನೆಗಳನ್ನು ಸಂದರ್ಶಿಸುವಾಗ ಸಿಕ್ಕ ಅಭಿಪ್ರಾಯದತೆ ಬಟ್ಟೆ ಬರೆಗಳಿಗೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚು ಖರ್ಚು ಮಾಡುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಧಾರ್ಮಿಕ ಆಚರಣೆಗಳಿಗಾಗಿ ಮಾಹಿತಿದಾರರಲ್ಲಿ ಅಭಿಪ್ರಾಯ ಸಂಗ್ರಹಿಸುವಾಗ ತಿಳಿದು ಬಂದ ಅಂಶವೆಂದರೆ ಶೇಕಡ 28 ರಷ್ಟು ಜನರು ವಾರ್ಷಿಕವಾಗಿ ಧಾರ್ಮಿಕ ಪೂಜೆಗಳಿಗಾಗಿ ರೂಪಾಯಿ 5000 ವೆಚ್ಚ ಮಾಡುತ್ತಾರೆ. 22 ಶೇಕಡ

ಜನರು 17ರಿಂದ 27 ಸಾವಿರದಷ್ಟು ಹಣವನ್ನು ಧಾರ್ಮಿಕ ವಿಚಾರಗಳಿಗೆ ವ್ಯಯ ಮಾಡುತ್ತಾರೆ. ಪ್ರಮುಖವಾದ ಅಂಶವೆಂದರೆ 7 ಶೇಕಡದಷ್ಟು ಮಾಹಿತಿದಾರರು ವಾರ್ಷಿಕವಾಗಿ 50 ಸಾವಿರಕ್ಕಿಂತಲೂ ಅಧಿಕವಾಗಿ ದುಡ್ಡು ವ್ಯಯ ಮಾಡುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಅಧ್ಯಯನದ ಮಾಹಿತಿಯ ಪ್ರಕಾರ ಪರವನ್ ಸಮುದಾಯದ ಪ್ರತಿ ಮನೆಯಲ್ಲಿಯೂ ವರ್ಷಕ್ಕೆ ಒಂದು ಬಾರಿ ದೈವಾರಾಧನೆಗೆ ಸಂಬಂಧಪಟ್ಟ ಧಾರ್ಮಿಕ ಪೂಜೆಗಳನ್ನು ನೆರವೇರಿಸುತ್ತಾರೆ. ವಿಷೇಶವಾಗಿ ಗಮನಿಸಬೇಕಾದ ಅಂಶವೆಂದರೆ ಪರವನ್ ಸಮುದಾಯದ ಬಹುತೇಕ ಮನೆಗಳಲ್ಲಿ ಮಂತ್ರದೇವತೆ ದೈವವನ್ನು ನಂಬಿಕೊಂಡು ಬಂದಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದವರ ಶೈಕ್ಷಣಿಕ ಸ್ಥಿತಿಗತಿ:

300 ಜನ ಮಾಹಿತಿದಾರರಲ್ಲಿ ಸರಿಸುಮಾರು ಶೇಕಡ 25(75) ಮಾಹಿತಿದಾರರು ಅನಕ್ಷರಸ್ಥರಾಗಿರುವುದು ಕಂಡು ಬಂದಿದೆ. ಇವರುಗಳು ಯಾರೂ ಕೂಡ ಶಾಲಾ ಕಾಲೇಜುಗಳ ಮೆಟ್ಟಿಲುಗಳನ್ನೇ ಹತ್ತಿಲ್ಲ, ನಿರಂತರ ಶಿಕ್ಷಣದ ಪ್ರಯೋಜನ ಪಡೆದಂತಹ ಕೆಲವರು ಓದಲು ಬರೆಯಲು ಕಲಿತಿರುತ್ತಾರೆ. ಅವರುಗಳಲ್ಲಿ ಕೆಲವರು ತಮ್ಮ ಹೆಸರನ್ನು ಬರೆಯಲು ತಿಳಿದವರು ಆಗಿದ್ದರೆ, ಇನ್ನೂ ಕೆಲವರು ದಿನನಿತ್ಯ ವಾರ್ತ ಪತ್ರಿಕೆಯನ್ನು ಸ್ವಲ್ಪ ಓದಲು ತಿಳಿದವರು ಆಗಿರುತ್ತಾರೆ. ಆದರೆ ಇವರುಗಳು ಔಪಚಾರಿಕವಾಗಿ ಯಾವುದೇ ರೀತಿಯ ಶಾಲೆಗೆ ಹೋಗಿಲ್ಲ ಎಂಬುದು ತಿಳಿದುಬಂದಿರುವ ಮಾಹಿತಿ, ಆದುದರಿಂದ ಇವರುಗಳನ್ನು ಅನಕ್ಷರಸ್ಥರು ಎಂಬುದಾಗಿ ಪರಿಗಣಿಸಲಾಗಿದೆ.

ಇನ್ನೂ ಕೆಲವು ಮಾಹಿತಿದಾರರಲ್ಲಿ ಹೆಚ್ಚಿನ ಜನರು ತಮ್ಮ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲೇ ಮುಕ್ತಾಯಗೊಳಿಸಿರುತ್ತಾರೆ, ಅಂತವರು 300 ಜನ ಮಾಹಿತಿದಾರರಲ್ಲಿ ಶೇಕಡ 56.7 (170) ಮಾಹಿತಿದಾರರು ಇರುವುದು ಕಂಡು ಬಂದಿದೆ. ಇವರುಗಳಲ್ಲಿ ಕೆಲವರು ಪ್ರಾಥಮಿಕ ಶಿಕ್ಷಣದವರೆಗೆ ಓದಿದ್ದರೆ, ಇನ್ನೂ ಕೆಲವರು ಪ್ರೌಢ ಶಿಕ್ಷಣದ ವರೆಗೆ (15%) ತಮ್ಮ ಶಿಕ್ಷಣವನ್ನು ಮಾಡಿರುತ್ತಾರೆ. ಇಂದಿನ ಪೀಳಿಗೆಯವರಲ್ಲಿ ಪರವನ್

ಸಮುದಾಯದವರಲ್ಲಿ ಉನ್ನತ ಶಿಕ್ಷಣ ಪಡೆದವರ ಸಂಖ್ಯೆ ಬಹಳ ಕಡಿಮೆ ಎಂದು ಹೇಳಬಹುದು. ಎಂಬುದಾಗಿ ಹೇಳಬಹುದು. ಅಧ್ಯಯನದಲ್ಲಿ ನಮಗೆ ದೊರೆತ ಮಾಹಿತಿ ಪ್ರಕಾರ ಕೇವಲ 3.3 (10) ಶೇಕಡ ಮಾಹಿತಿದಾರರು ಮಾತ್ರ ಕಾಲೇಜು ಶಿಕ್ಷಣವನ್ನು ಪಡೆದವರು ಇರುವುದು ಕಂಡು ಬಂದಿದೆ.

ಮಾಹಿತಿದಾರರ ಕುಟುಂಬ ಸದಸ್ಯರ ಶೈಕ್ಷಣಿಕ ಸ್ಥಾನಮಾನ: 300 ಕುಟುಂಬಗಳಲ್ಲಿ ಒಟ್ಟು 457 ಮಕ್ಕಳಿದ್ದು, ಅವುಗಳಲ್ಲಿ ಶೇಕಡ 1.09 (5) ಮಾಹಿತಿದಾರರ ಮಕ್ಕಳು ಮಾತ್ರ ಸ್ನಾತಕೋತ್ತರ ಪದವಿಯನ್ನು ಮಾಡುತ್ತಿರುವುದು, ಕಂಡು ಬರುತ್ತದೆ. ಮಾಹಿತಿಯ ಪ್ರಕಾರ ಹೇಳುವುದಾದರೆ ಸ್ನಾತಕೋತ್ತರ ಪದವೀದರರ ಸಂಖ್ಯಾ ಪ್ರಮಾಣವು ಸರಾಸರಿ 3.40 ಶೇಕಡದಷ್ಟು ಹೆಚ್ಚಾಗಿರುವುದು ಕಂಡು ಬರುತ್ತದೆ. ಇದಕ್ಕೆ ಕಾರಣಗಳು ಹಲವಾರು ಇದ್ದರೂ ಸರ್ಕಾರ ರೂಪಿಸಿರುವ ಯೋಜನೆಗಳೇ ಮೂಲ ಕಾರಣ, ಮತ್ತು ಇವುಗಳನ್ನು ಸಂಪೂರ್ಣವಾಗಿ ಸದುಪಯೋಗ ಮಾಡಿಕೊಳ್ಳುತ್ತಿರುವ ಶಿಕ್ಷಣವಂತ ಜನರು ಮತ್ತು ಅದನ್ನು ಉಪಯೋಗಿಸಿಕೊಂಡು ತಮ್ಮ ಮಕ್ಕಳನ್ನು ಸ್ಪರ್ಧಾತ್ಮಕ ಕಾಲದಲ್ಲಿ ಒಬ್ಬರನ್ನಾಗಿ ಮಾಡುವುವುದು ಮತ್ತೊಂದು ಗಮನಿಸಬೇಕಾಗಿರುವ ಪ್ರಮುಖ ಅಂಶ.

ತಾಂತ್ರಿಕ ಶಿಕ್ಷಣದ ಕಡೆಗೆ ಹೆಚ್ಚಿನ ಮಾಹಿತಿದಾರರು ಒಲವು ವ್ಯಕ್ತಪಡಿಸುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಕೆಲವೊಂದು ಔದ್ಯೋಗಿಕ ಉದ್ಯೋಗಳೆಂಬುದಾಗಿ ಪರಿಗಣಿಸಲ್ಪಟ್ಟ ಲ್ಯಾಬ್ ಟೆಕ್ನೀಷಿಯನ್, ನರ್ಸಿಂಗ್, ಟೀಚರ್ಸ್ ಟ್ರೈನಿಂಗ್ ಮೊದಲಾದ ಶಿಕ್ಷಣವನ್ನು ಪಡೆಯುತ್ತಿರುವ ಸಂಖ್ಯೆ 2.70 ಶೇಕಡಾರಷ್ಟಿರುವುದು ಬೆಳಕಿಗೆ ಬಂದಿದೆ.

ದೈವನರ್ತಕರ ಶೈಕ್ಷಣಿಕ ಸ್ಥಿತಿಗತಿ: ಪರವನ್ ಸಮುದಾಯದ ಕುಲಕಸುಬಾದಂತಹ ದೈವನರ್ತನವನ್ನು ಮುಂದುವರಿಸಿಕೊಂಡು ಹೋಗುವವರು ಶೇಕಡ 21.3 ರಷ್ಟು ಇದ್ದು ಅವರ ಶೈಕ್ಷಣಿಕ ಮಟ್ಟ ತುಂಬ ಹಿಂದುಳಿದಿರುವುದು ಅಧ್ಯಯನದಲ್ಲಿ ಕಂಡುಬರುತ್ತದೆ. ಸುಮಾರು ಶೇಕಡ ೫೦ ರಷ್ಟು ಪರವನ್ ಸಮುದಾಯದ ದೈವನರ್ತಕರು ಕೇವಲ ಪ್ರಾಥಮಿಕ ಶಿಕ್ಷಣವನ್ನು ಮಾತ್ರ ಪಡೆದಿರುತ್ತಾರೆ. ಪ್ರೌಢ ಶಿಕ್ಷಣ ಪಡೆದವರು ಕೇವಲ

25 ಶೇಕಡದಷ್ಟಿದ್ದು ಬಡತನದ ಸಮಸ್ಯೆಯೇ ಶೈಕ್ಷಣಿಕವಾಗಿ ಹಿಂದುಳಿಯುವಿಕೆಗೆ ಕಾರಣ ಎಂದು ಹೇಳಬಹುದು. ಕಾಲೇಜು ಶಿಕ್ಷಣವನ್ನು ಪಡೆದ ದೈವನರ್ತಕರ ಸಂಖ್ಯೆ ಕೇವಲ 1 ಶೇಕಡ ಇದ್ದು ಸುಮಾರು 24 ಶೇಕಡದಷ್ಟು ದೈವನರ್ತಕರು ಅನಕ್ಷರಸ್ಥರಾಗಿದ್ದಾರೆ.

ದೈವನರ್ತಕರ ಮಕ್ಕಳ ಶಿಕ್ಷಣ: ದೈವ ನರ್ತನ ಮುಂದುವರಿಸುತ್ತಿರುವ ಪರವನ್ ಸಮುದಾಯದವರು ಶೇಕಡ 21ರಷ್ಟು ಇದ್ದು ದೈವನರ್ತಕರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ದೈವನರ್ತನವನ್ನು ಮುಂದುವರಿಸುತ್ತಿರುವವರಲ್ಲಿ ಸುಮಾರು 48 ಶೇಕಡ ಜನರು ಪ್ರಾಥಮಿಕ ಶಿಕ್ಷಣವನ್ನು ಪಡೆದವರಾಗಿರುತ್ತಾರೆ. ಪ್ರೌಢ ಶಿಕ್ಷಣವನ್ನು ಪಡೆದವರ ಸಂಖ್ಯೆ ಸುಮಾರು 29 ರಷ್ಟು ಇದ್ದು, ದೈವನರ್ತನ ಮುಂದುವರಿಸುವವರಲ್ಲಿ 9 ಶೇಕಡ ಅನಕ್ಷರಸ್ಥರೂ ಇದ್ದಾರೆ. ಅಧ್ಯಯನದಲ್ಲಿ ಕಂಡುಬಂದ ಮಾಹಿತಿಯ ಪ್ರಕಾರ ದೈವನರ್ತನ ಮುಂದುವರಿಸುವವರಲ್ಲಿ ಉನ್ನತ ಶಿಕ್ಷಣ ಪಡೆಯುವವರೂ ಇದ್ದಾರೆ. ಪ್ರಸ್ತುತ ಅಧ್ಯಯನದಲ್ಲಿ ಉನ್ನತ ಉದ್ಯೋಗದಲ್ಲಿ ಇದ್ದು ದೈವ ನರ್ತನವನ್ನು ಮುಂದುವರಿಸುವವರು ಶೇಕಡ 14ಷ್ಟು ಇದ್ದು ಇವರು ಇಂಜಿನಿಯರಿಂಗ್, ಸ್ನಾತ್ತಕೋತ್ತರ, ಪದವಿಯ ಜೊತೆಗೆ ದೈವನರ್ತನವನ್ನೂ ಕೂಡ ಮುಂದುವರಿಸಿಕೊಂಡು ಬರುತ್ತಿದ್ದಾರೆ.

ದೈವನರ್ತನ ಮುಂದುವರಿಸಲು ಇಚ್ಛಿಸುವವರ ವಿವರ: ದೈವನರ್ತನವನ್ನು ಮುಂದುವರಿಸಬೇಕೆ ಬೇಡವೇ ಎಂಬ ಪ್ರಶ್ನೆಗೆ ಉತ್ತರ ನಮ್ಮ ಕೈಯಲ್ಲಿ ಇಲ್ಲ, ಎಲ್ಲವೂ ದೈವ ಇಚ್ಛೆ ಎಂಬುದಾಗಿ ಸರಿಸುಮಾರು 34 ಶೇಕಡ ಜನರು, ಅದರಲ್ಲೂ ಯಾರು ತಲತಲಾಂತರದಿಂದ ಭೂತಾರಾಧನೆ ಮಾಡಿಕೊಂಡು ಬರುತ್ತಿದ್ದಾರೆಯೋ ಅಂತವರು ನೇರವಾಗಿ ಹೌದು ನಾವು ದೈವನರ್ತನ ಕೆಲಸವನ್ನು ಮುಂದುವರಿಸುತ್ತೇವೆ, ಯಾಕೆಂದರೆ ಈ ದೈವರ್ನರ್ತನ ಬಹಳ ಹಿಂದಿನಿಂದಲೂ ನಾವು ಮಾಡಿಕೊಂಡು ಬರುತ್ತಿದ್ದೇವೆ, ಅದನ್ನು ನಿಲ್ಲಿಸಲು ಸಾಧ್ಯವಿಲ್ಲ, ನಾವೇ ಅದನ್ನು ಮುಂದುವರಿಸಬೇಕು ಎಂಬುದಾಗಿ ಹೇಳಿರುತ್ತಾರೆ. ಸುಮಾರು 66 ಶೇಕಡ ದೈವ ನರ್ತಕರು ತಮ್ಮ ಮಕ್ಕಳಿಗೆ ದೈವ ನರ್ತನ ಸೇವೆ ಮುಂದುವರಿಸಲು ಆಸಕ್ತಿ ಇಲ್ಲವೆಂದು ತಮ್ಮ

ಅಭಿಪ್ರಾಯ ತಿಳಿಸುತ್ತಾರೆ. ಅಧ್ಯಯನದಲ್ಲಿ ಕಂಡು ಬಂದ ಹಾಗೆ ಶಿಕ್ಷಣ ಪಡೆದ ದೈವನರ್ತಕರ ಮಕ್ಕಳು ಖಾಯಂ ಉದ್ಯೋಗವನ್ನು ಪಡೆಯಲು ಇಚ್ಚಿಸಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಜೊತೆಗೆ ದೈವನರ್ತಕರ ಪ್ರಕಾರ ಅವರ ಮಕ್ಕಳು ಇಡಿ ರಾತ್ರಿ ನರ್ತನ ಮಾಡಿ ನಿದ್ದೆ ಬಿಟ್ಟು ಕೊನೆಗೆ ಅತ್ಯಲ್ಪ ಸಂಬಳವನ್ನು ಪಡೆಯುವುದು ನಮಗೆ ಇಷ್ಟ ಇಲ್ಲವೆಂದು ತಮ್ಮ ಅಭಿಪ್ರಾಯ ತಿಳಿಸುತ್ತಾರೆ.

ಪರವನ್ ಸಮುದಾಯದಲ್ಲಿ ಹೆಣ್ಣು ಮಕ್ಕಳ ಶಿಕ್ಷಣ: ಪರವನ್ ಸಮುದಾಯದ ಹೆಣ್ಣು ಮಕ್ಕಳು ಶೈಕ್ಷಣಿಕ ಸ್ಥಿತಿಗತಿಯನ್ನು ಅವಲೋಕಿಸಿದಾಗ ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಶೇಕಡ 68 ರಷ್ಟು ಮಾಹಿತಿದಾರರು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಲು ತಮ್ಮ ಒಲವನ್ನು ವ್ಯಕ್ತ ಪಡಿಸುತ್ತಾರೆ. ಜೊತೆಗೆ ಶೇಕಡ 32 ರಷ್ಟು ಮಾಹಿತಿದಾರರು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ನಿರಾಸಕ್ತಿಯನ್ನು ತೋರಿದ್ದಾರೆ.

ಮಕ್ಕಳ ಭವಿಷ್ಯತ್ತಿನ ಶಿಕ್ಷಣದ ಬೆಗ್ಗೆ ಮಾಹಿತಿದಾರ ಅಭಿಲಾಷೆ: 300 ಜನ ಪರವನ್ ಸಮುದಾಯದವರನ್ನು ತಮ್ಮ ಮಕ್ಕಳಿಗೆ ಯಾವ ರೀತಿಯ ಶಿಕ್ಷಣ ನೀಡ ಬಯಸುತ್ತೀರಿ ಎಂಬ ಪ್ರಶ್ನೆಗೆ ಶೇಕಡ 38.7 ಮಾಹಿತಿದಾರರು ತಮ್ಮ ಮಕ್ಕಳು ಸ್ನಾತಕೋತ್ತರ ಪದವಿ ಪಡೆಯಬೇಕು ಎಂಬುದಾಗಿ ತಿಳಿಸಿರುತ್ತಾರೆ. ಅದೇ ಕೆಲವು ವರ್ಷಗಳ ಹಿಂದಿನ ಶಿಕ್ಷಣ ಸ್ಥಿತಿಗತಿಯನ್ನು ಗಣನೆಗೆ ತೆಗೆದುಕೊಂಡರೇ ಇದು ನಿಜವಾಗಿಯೂ ಶಿಕ್ಷಣದ ಕ್ರಾಂತಿ ಎಂಬುದಾಗಿಯೇ ಹೇಳಬಹುದು. ಯಾಕೆಂದರೆ ತಾವು ಅನಕ್ಷರಸ್ಥರಾಗಿದ್ದರೂ, ಹೆಚ್ಚು ಓದು ಇಲ್ಲದಿದ್ದರೂ ನಮ್ಮ ಮಕ್ಕಳು ಸ್ನಾತಕ್ಕೋತ್ತರ ಪದವಿ ಮಾಡಬೇಕು, ನಮ್ಮ ಮಕ್ಕಳು ಉಪನ್ಯಾಸಕರಾಗಬೇಕು ಎಂಬ ಅಭಿಲಾಷೆಯನ್ನು ಪೋಷಕರು ಇಟ್ಟುಕೊಂಡಿರುವುದು ನಿಜವಾಗಿಯೂ ಶಿಕ್ಷಣದ ಕ್ರಾಂತಿ ಎಂದೇ ಹೇಳಬಹುದು.

ಅದೇ ರೀತಿ ಕೆಲವು ಪೋಷಕರು (9.3%) ನಮ್ಮ ಮಕ್ಕಳು ಇಂಜಿನಿಯರಿಂಗ್ ಓದಿಸಬೇಕು ಎನ್ನುವ ಅಭಿಲಾಷೆಯನ್ನು ಹೊಂದಿದ್ದಾರೆ, ಅದಕ್ಕಿಂತಲೂ ಪ್ರಮುಖವಾಗಿ ಶೇಕಡ 8.7 ಮಾಹಿತಿದಾರರು ನಮ್ಮ ಮಕ್ಕಳನ್ನು ವೈದ್ಯಕೀಯ ಶಿಕ್ಷಣವನ್ನು ನೀಡಬೇಕು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇಕಡ

21.3 ರಷ್ಟು ಪೋಷಕರು ತಮ್ಮ ಮಕ್ಕಳಿಗೆ ಪದವಿ ಶಿಕ್ಷಣ ನೀಡಿ ಯಾವುದಾದರೂ ಖಾಸಗಿ ಉದ್ಯೋಗ ಮಾಡಿಸಬೇಕೆಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುತ್ತಾರೆ. ವೃತ್ತಿಪರ ಶಿಕ್ಷಣ ನೀಡಬೇಕೆಂದು 22 ಶೇಕಡದಷ್ಟು ಪೋಷಕರು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ವೃತ್ತಿಪರ ಶಿಕ್ಷಣಗಳಾದಂತಹ ಐ.ಟಿ.ಐ, ಡಿಪ್ಲೋಮ, ನರ್ಸಿಂಗ್, ಬಿ.ಎಡ್ ಮುಂತಾದ ಗುಣಮಟ್ಟದ ಶಿಕ್ಷಣವನ್ನು ನೀಡಬೇಕೆಂಬ ಅಭಿಲಾಷೆಯನ್ನು ಹೊಂದಿರುತ್ತಾರೆ.

ಹೆಣ್ಣು ಮಕ್ಕಳ ಶಿಕ್ಷಣದ ನಿರಾಸಕ್ತಿಗೆ ಕಾರಣ: ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡದಿರಲು ಇರುವಂತಹ ಕಾರಣಗಳನ್ನು ವಿವರಿಸಲಾಗಿದೆ ಇದರನ್ವಯ ಬಡತನವೇ ಮುಖ್ಯ ಕಾರಣವೆಂದು ತಿಳಿಸಿದವರಲ್ಲಿ ಶೇಕಡ 69.8 ರಷ್ಟಿದ್ದಾರೆ. ಮದುವೆಯಾಗಿ ಹೋಗುವವಳು ಎಂಬುದಾಗಿ ಅಭಿಪ್ರಾಯ ವ್ಯಕ್ತ ಪಡಿಸಿದವರಲ್ಲಿ 12.5 ಶೇಕಡದಷ್ಟಿದ್ದಾರೆ. ಶೇಕಡಾ 9.4 ರಷ್ಟು ಮಾಹಿತಿದಾರರು ಹೆಣ್ಣು ಮಕ್ಕಳು ಮನೆಯ ಕೆಲಸಕ್ಕೆ ಸಹಾಯಕರಾಗಿ ಬೇಕಾಗಿರುವುದರಿಂದ ಅವರಿಗೆ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲವೆಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ. ಶಾಲೆ ಕಾಲೇಜು ಮನೆಗೆ ಹತ್ತಿರದಲ್ಲಿ ಇಲ್ಲದಿರುವ ಕಾರಣ ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲಿಲ್ಲ ಎಂಬುದಾಗಿ ಶೇಕಡ 8.3ರಷ್ಟು ಮಾಹಿತಿದಾರರು ಅಭಿಪ್ರಾಯ ತಿಳಿಸಿದ್ದಾರೆ.

ಪರವನ್ ಸಮುದಾಯದವರ ಆರೋಗ್ಯದ ಸ್ಥಿತಿ ಗತಿ: ಪರವನ್ ಸಮುದಾಯದ ಜನರು ಹಲವು ಬಗೆಯ ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿರುವುದು ಪ್ರಸ್ತುತ ಅಧ್ಯಯನದಲ್ಲಿ ಕಂಡು ಬಂದಿದೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರವನ್ ಸಮುದಾಯದ ದೈವನರ್ತಕರು ಬೆನ್ನು ನೋವು, ಮಂಡಿ ಕೀಲು ನೋವು ಮುಂತಾದ ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ 300 ಮಾಹಿತಿದಾರರಲ್ಲಿ 19 ಶೇಕಡ ಮಾಹಿತಿದಾರರು ಬೆನ್ನು ನೋವಿನ ಸಮಸ್ಯೆ ಇದೆ ಎಂದು ತಿಳಿಸಿರುತ್ತಾರೆ, ಮಂಡಿ ಕೀಲು ನೋವು ಸಮಸ್ಯೆ ಇರುವವರು ಶೇಕಡಾ 36.67 ರಷ್ಟಿದ್ದಾರೆ. ಸಾಮಾನ್ಯವಾಗಿ ದೈವನರ್ತಕರು ರಾತ್ರಿ ಸಮಯದಲ್ಲಿ ನರ್ತನ ಸೇವೆ ಮಾಡುವುದರಿಂದ ತಲೆನೋವಿನ ಸಮಸ್ಯೆ

ಕಂಡುಬರುತ್ತದೆ ಸುಮಾರು 24.33 ಶೇಕಡದಷ್ಟು ಮಾಹಿತಿದಾರರು ತಲೆನೋವಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇತರ ಆರೋಗ್ಯ ಸಮಸ್ಯೆಗಳಾದ ಮಧುಮೇಹ, ರಕ್ತದೊತ್ತಡ, ಮಲೇರಿಯ ಮುಂತಾದ ಅಪೌಷ್ಟಿಕತೆಗೆ ಸಂಬಂಧಪಟ್ಟ ಸಾಮಾನ್ಯ ಆರೋಗ್ಯದ ಸಮಸ್ಯೆಗಳು ಇದೆ ಎಂಬುದಾಗಿ 21.67 ಶೇಕಡದಷ್ಟು ಮಾಹಿದಾರರು ತಿಳಿಸಿದ್ದಾರೆ.

ಆರೋಗ್ಯದ ಸಮಸ್ಯೆಗೆ ಮೂಲ ಕಾರಣಗಳು:

ದುಶ್ಚಟಗಳ ವಿವರ: ಮಾಹಿತಿದಾರರು ಯಾವ ರೀತಿಯ ದುರಭ್ಯಾಸಗಳಿಗೆ ಒಳಗಾಗಿದ್ದಾರೆ ಎಂಬುದನ್ನು ಸೂಚಿಸಲಾಗಿದೆ. ಇದರನ್ವಯ 300 ಮಾಹಿತಿದಾರರಲ್ಲಿ 29 ಶೇಕಡ ಪರವನ್ ಜನರು ಮಧ್ಯಪಾನ ಮಾಡುವುದಾಗಿ ತಿಳಿಸಿದ್ದಾರೆ. 300 ಜನ ಮಾಹಿತಿದಾರರಲ್ಲಿ ಸರಿಸುಮಾರು 23 ಶೇಕಡ ಮಾಹಿತಿದಾರರು ದೂಮಪಾನ, 23 ಶೇಕಡ ಜನರು ತಂಬಾಕು, 25 ಶೇಕಡ ಜನರು ಎಲೆ ಅಡಿಕೆ ಹಾನಿಕಾರಕ ವಸ್ತುಗಳನ್ನು ತಿನ್ನುವ ಅಭ್ಯಾಸವನ್ನು ಇಟ್ಟುಕೊಂಡಿರುತ್ತಾರೆ ಎಂಬುದು ತಿಳಿದು ಬಂದಿದೆ.

ವೈದ್ಯಕೀಯ ಚಿಕಿತ್ಸೆಯ ವಿಧಾನದ ವಿವರ: ಬಡತನದ ಹೊರತಾಗಿಯೂ ಪರವನ್ ಸಮುದಾಯದ ಜನರು ಆರೋಗ್ಯಕ್ಕೆ ಸಂಬಂಧಿಸಿದ ಚಿಕಿತ್ಸೆಗಾಗಿ ಹೆಚ್ಚಿನ ಮಾಹಿತಿದಾರರು ತಾವು ಖಾಸಗಿ ಆಸ್ಪತ್ರೆಗೆ ಹೋಗುವುದಾಗಿ ತಿಳಿಸಿರುತ್ತಾರೆ. ಸುಮಾರು ಶೇಕಡ 48 ರಷ್ಟು ಮಾಹಿತಿದಾರರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುವುದಾಗಿ ತಿಳಿಸಿರುತ್ತಾರೆ. 26.33 ಶೇಕಡದಷ್ಟು ಮಾಹಿತಿದಾರರು ತಾವು ಸರ್ಕಾರಿ ಆಸ್ಪತ್ರೆಗೆ ಹೋಗಿ ಸರಿಯಾದ ಔಷಧಿ ಪಡೆಯುತ್ತೇವೆ ಎಂಬುದಾಗಿ ತಿಳಿಸಿರುತ್ತಾರೆ. ಪರವನ್ ಸಮುದಾಯದ 13 ಶೇಕಡ ಮಾಹಿತಿದಾರರು ಪರಿಸ್ಥಿತಿಗೆ ಅನುಗುಣವಾಗಿ ಸರಕಾರಿ ಹಾಗೂ ಖಾಸಗಿ ಆಸ್ಪತ್ರೆಗೆ ತೆರಳಿ ಚಿಕಿತ್ಸೆಯನ್ನು ಪಡೆಯುವುದಾಗಿ ತಿಳಿಸಿರುತ್ತಾರೆ. ಶೇಕಡ 12.33 ರಷ್ಟು ಮಾಹಿತಿದಾರರು ತಿಳಿಸಿರುವ ಪ್ರಕಾರ ತಮಗೆ ಅನಾರೋಗ್ಯ ಸಂಭವಿಸಿದಲ್ಲಿ ಆಯುರ್ವೇದಿಕ್ ವೈದ್ಯರಲ್ಲಿ ಚಿಕಿತ್ಸೆ ಪಡೆಯುವುದಾಗಿ ತಿಳಿಸಿರುತ್ತಾರೆ.

ಪರವನ್ ಸಮುದಾಯದವರು ಬಳಸಿದ ಸರಕಾರಿ ಸೌಲಭ್ಯಗಳು.

ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಅರಿವು: ಪರವನ್ ಸಮುದಾಯದ ಮಾಹಿತಿದಾರರಲ್ಲಿ ಸುಮಾರು 67 ಶೇಕಡ ಪೋಷಕರು ತಮಗೆ ಶೈಕ್ಷಣಿಕ ಸರಕಾರಿ ಸೌಲಭ್ಯಗಳ ಮಾಹಿತಿ ಇದೆಯೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ವಿಷಯಕ್ಕೆ ಸಂಬಂಧಿಸಿದಂತೆ ಪರವನ್ ಸಮುದಾಯದ ಪೋಷಕರನ್ನು ಪ್ರಶ್ನಿಸಿದಾಗ ಕೆಲವರು (67%) ಜನ ಮಾಹಿತಿದಾರರು ನಮಗೆ ಗೊತ್ತಿದೆ ಎಂಬುದಾಗಿ ತಿಳಿಸಿದರೆ ಇನ್ನೂ ಕೆಲವರು (9) ಗೊತ್ತಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಪಡೆದಿರುವ ಸರಕಾರಿ ಸೌಲಭ್ಯಗಳ ವಿವರ: 300 ಜನ ಪರವನ್ ಕುಟುಂಬಗಳಲ್ಲಿ 91 ಶೇಕಡ ಮಾಹಿತಿದಾರರು ವಿದ್ಯಾರ್ಥಿ ವೇತನದ ಸವಲತ್ತುಗಳನ್ನು ಉಪಯೋಗಿಸಿರುವುದು ಕಂಡು ಬಂದಿದೆ. ಕೆಲವರು ಉನ್ನತ ಶಿಕ್ಷಣವನ್ನು ಕೂಡ ಮುಗಿಸಿರುತ್ತಾರೆ. ಇನ್ನುಳಿದ 71.67 ಶೇಕಡ ಮಾಹಿತಿದಾರರು ವಸತಿ ನಿಲಯದ ಸವಲತ್ತುಗಳನ್ನು ಉಪಯೋಗಿಸಿಲ್ಲಎಂಬುದು ತಿಳಿದು ಬಂದಿದೆ. ಇದಕ್ಕೆ ಕಾರಣವೇನೆಂದರೆ ಪರವನ್ ಸಮುದಾಯದ ಹೆಚ್ಚಿನವರಿಗೆ ತಮ್ಮ ಮಕ್ಕಳನ್ನು ದೂರದ ಊರಿನ ವಸತಿ ಶಾಲೆಯಲ್ಲಿ ಉಳಿಸಿ ಶಿಕ್ಷಣ ಕೊಡಿಸಲು ಇಷ್ಟವಿಲ್ಲದ ಕಾರಣ ತಮ್ಮ ಮಕ್ಕಳನ್ನು ವಸತಿನಿಲಯಕ್ಕೆ ಸೇರಿಸದೆ, ಮನೆಯ ಹತಿರದಲ್ಲೇ ಇರುವ ಶಾಲಾ ಕಾಲೇಜಿಗೆ ಸೇರಿಸಿ ಶಿಕ್ಷಣ ಪಡೆಯುತ್ತಿರುವುದನ್ನು ಕಾಣಬಹುದು. ಅಧ್ಯಯನದಲ್ಲಿ ಸಿಕ್ಕ ಮಾಹಿತಿಯ ಪ್ರಕಾರ ಕೇವಲ 3 ಶೇಕಡ ವಿದ್ಯಾರ್ಥಿಗಳು ಮಾತ್ರ ವಸತಿನಿಲಯದ ಉಪಯೋಗವನ್ನು ಬಳಸಿಕೊಂಡಿದ್ದಾರೆ. 300 ಜನ ಮಾಹಿತಿದಾರರಲ್ಲಿ ಕೇವಲ 6.33 ಶೇಕಡ ಜನರು ಪರೀಕ್ಷ ಪೂರ್ವ ತರಬೇತಿ ಕಾರ್ಯಕ್ರಮಗಳ ಸವಲತ್ತುಗಳನ್ನು ಉಪಯೋಗಿಸಿರುವವರು ಸಿಕ್ಕುತ್ತಾರೆ, ಇನ್ನುಳಿದ 93.67 ಶೇಕಡಾ ಜನರು ಉಪಯೋಗಿಸಿಲ್ಲದಿರುವುದು ಕಂಡು ಬರುತ್ತದೆ, ಅದೇ ರೀತಿ ಬರೀ 12.33 ಶೇಕಡ ಮಾಹಿತಿದರರು ಕಂಪ್ಯೂಟರ್ ಉಚಿತ ತರಬೇತಿ ಕಾರ್ಯಕ್ರಮದ ಸವಲತ್ತುಗಳನ್ನು ಮಾತ್ರ ಉಪಯೋಗಿಸಿರುವುದು ಕಂಡು ಬಂದು, 87.33 ಮಾಹಿತಿದಾರರು ಉಪಯೋಗಿಸದೆ ಇದ್ದಿರುವುದು ಕಂಡು ಬರುತ್ತದೆ. ಕೇವಲ 1 ಶೇಕಡ ಜನ

ಮಾತ್ರ ಇದರ ಸವಲತ್ತುಗಳನ್ನು ಪಡೆದು ತಮ್ಮ ಶಿಕ್ಷಣವನ್ನು ಮುಂದುವರಿಸುತ್ತಿದ್ದಾರೆ ಎಂಬ ಮಾಹಿತಿ ತಿಳಿದು ಬಂದಿದೆ.ಇದಕ್ಕೆ ಕಾರಣವನ್ನು ಕೇಳಿದಾಗ ಕೆಲವರು ಕೆಲವು ರೀತಿಯ ಉತ್ತರಗಳನ್ನು ನೀಡಿರುತ್ತಾರೆ.

ಸೌಲಭ್ಯಗಳ ಕುರಿತ ಮಾಹಿತಿ ಪಡೆದ ಮೂಲ:ಪರವನ್ ಸಮುದಾಯದವರು ಪಡೆದಕೊಂಡ ಸೌಲಭ್ಯಗಳ ಕುರಿತ ಮಾಹಿತಿಯ ಮೂಲದ ಅನ್ವಯ 31 ಶೇಕಡ ಮಾಹಿತಿದಾರರು ತಿಳಿಸಿರುವ ಪ್ರಕಾರ ಶೈಕ್ಷಣಿಕ ಸೌಲಭ್ಯಗಳ ಮಾಹಿತಿಯನ್ನು ಶಿಕ್ಷಕರಿಂದ ಪಡೆದಿರುತ್ತಾರೆ. ಸುಮಾರು 7ಶೇಕಡ ಮಾಹಿತಿದಾರರು ಸೌಲಭ್ಯಗಳ ಮಾಹಿತಿಯನ್ನು ಮಾಧ್ಯಮದ ಮೂಲಕ ಅಂದರೆ ಟೀವಿ, ವಾರ್ತಾ ಪತ್ರಿಕೆಗಳಿಂದ ಪಡೆದಿರುವುದಾಗಿ ತಿಳಿಸಿರುತ್ತಾರೆ. ಅತೀ ಹೆಚ್ಚಿನ ಜನರು ಅಂದರೆ ಶೇಕಡ 48 ರಷ್ಟು ಮಾಹಿತಿದಾರರು ಶೈಕ್ಷಣಿಕ ಮಾಹಿತಿಯನ್ನು ಆಪ್ತರ ಮೂಲಕ ಪಡೆದಿರುವುದಾಗಿ ಅಭಿಪ್ರಾಯ ಪಡುತ್ತಾರೆ.

ಪರವನ್ ಸಮುದಾಯದವರ ಸಂಘ ಸಂಸ್ಥೆಗಳಲ್ಲಿ ಭಾಗವಹಿಸುವಿಕೆ: ಪರವನ್ ಸಮುದಾಯದ ಮಹಿಳೆಯರು ಮತ್ತು ಪುರುಷರನ್ನು ಪ್ರತ್ಯೇಕವಾಗಿ ಪ್ರಶ್ನಿಸಿದಾಗ, ಒಟ್ಟು 35 ಜನ ಮಹಿಳೆಯರಲ್ಲಿ ಹೆಚ್ಚಿನ (85.71%) ಮಹಿಳೆಯರು ಸ್ತ್ರೀಶಕ್ತಿ ಸಂಘದ ಸದ್ಯಸ್ಯರಾಗಿರುವುದು ಕಂಡು ಬಂದಿದೆ.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಸುಮಾರು 74 ಶೇಕಡ ಜನರು ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಧರ್ಮಸ್ಥಳ ಯೋಜನೆಯಲ್ಲಿ ಕೇವಲ ಮಹಿಳೆಯರು ಮಾತ್ರವಲ್ಲದೆ ಪುರುಷರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಸರ್ಕಾರ ನಿರ್ಮಿತ ಸಂಘಸಂಸ್ಥೆಗಳ ಹಾಗೆ ಶ್ರೀ ಕ್ಷೇತ್ರ ಧರ್ಮಸ್ಥಳದವರು ಗ್ರಾಮೀಣ ಅಭಿವೃದ್ಧಿ ಸರ್ಕಾರೇತರ ಸಂಘದಿಂದ ಸ್ವ ಸಹಾಯ ಸಂಘಗಳನ್ನು ಸ್ಥಾಪಿಸಿ, ಸಂಘಗಳ ಮೂಲಕ ಮಹಿಳೆಯರನ್ನು ಸಬಲೀಕರಣ ಮಾಡುವ ಧ್ಯೇಯೊದ್ದೇಶಗಳನ್ನು ಹೊಂದಿದೆ.

ಪರವನ್ ಸಮುದಾಯದ ಜನರು ಇತರ ವೃತ್ತಿಪರ ಸಂಘ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ. ಕೆಲವೊಂದು ಯುವಪೀಳಿಗೆಯ ಜನರು ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಸದಸ್ಯರಾಗಿಯೂ ಇದ್ದಿರುವುದು ಕಂಡು ಬರುತ್ತದೆ. ಒಟ್ಟು 300 ಜನ ಮಾಹಿತಿದಾರರಲ್ಲಿ ಅದರಲ್ಲೂ

ಮಾಹಿತಿದಾರರಲ್ಲಿ ಸರಿಸುಮಾರು 40 ಶೇಕಡ ಮಾಹಿತಿದಾರರು ರಾಷ್ಟ್ರೀಯ ಸ್ವಯಂ ಸೇವಾ ಸಂಘದಂತಹ ವೃತ್ತಿಪರ ಸಂಘಟನೆಗಳಲ್ಲಿ ಸದಸ್ಯರಾಗಿರುವುದು ಕಂಡು ಬಂದಿದೆ. ಅದೇ ರೀತಿ ರೋಟರಿ ಕ್ಲಬ್, ಜೆ.ಸಿ.ಐ, ಯುವಕ ಮಂಡಲ, ಭಜನಾ ಮಂಡಳಿ ಮುಂತಾದ ಸಂಘಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಅಧ್ಯಯನದಲ್ಲಿ ಕಂಡು ಬಂದಿದೆ.

ಸಂಘ ಸಂಸ್ಥೆಗಳಲ್ಲಿ ತಮ್ಮ ಪಾತ್ರ: ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದ ಜನರ ವಿವಿಧ ಸಂಸ್ಥೆಗಳಲ್ಲಿ ಯಾವ ರೀತಿಯ ಪಾತ್ರವನ್ನು ಹೊಂದಿದ್ದಾರೆ ಎಂಬುದನ್ನು ವಿಶ್ಲೇಷಿಸುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯಕ್ಕೆ ಒಳಪಡಿಸಿದ 300 ಮನೆಗಳಲ್ಲಿ ಶೇಕಡಾ 31.8 ಜನರು ಇನ್ನೂ ಕೂಡಾ ತಮ್ಮ ಜಾತಿಯನ್ನು ಬಲಪಡಿಸಲು ಕಾರ್ಯನಿರ್ವಹಿಸಬೇಕಾದಂತಹ ಪರವನ್ ಜಾತಿ ಸಮುದಾಯದ ಸದಸ್ಯತ್ವವನ್ನು ಪಡೆದುಕೊಂಡಿಲ್ಲ. ಶೇಕಡಾ 2.5 ಜನರು ಜಾತಿ ಸಂಘಟನೆಯ ವಿವಿಧ ಹಂತಗಳಲ್ಲಿ ಕಾರ್ಯದರ್ಶಿಯಾಗಿ ಕಾರ್ಯವನ್ನು ನಿರ್ವಹಿಸಿದ್ದು, ಶೇಕಡಾ 1.5 ಜನರು ವಿವಿಧ ಹಂತಗಳ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ. ಪ್ರಸ್ತುತ ಸಾಮಾಜಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಸ್ವಸಹಾಯ ಸಂಘಗಳಲ್ಲಿ ಶೇಕಡಾ 36.75 ಜನರು ಮಾತ್ರಾ ಸದಸ್ಯತ್ವವನ್ನು ಪಡೆದುಕೊಂಡಿದ್ದು,ಶೇಕಡಾ 48.5 ಜನರು ಸದಸ್ಯತ್ವವನ್ನು ಪಡೆದುಕೊಂಡಿಲ್ಲ. ಶೇಕಡಾ 4.25 ಜನರು ಸ್ವ- ಸಹಾಯ ಸಂಘಗಳಲ್ಲಿ ಕಾರ್ಯದರ್ಶಿಯಾಗಿ ಕೆಲಸ ಕಾರ್ಯ ನಿರ್ವಹಿಸಿದ್ದು, ಶೇಕಡಾ 7.5 ಜನರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದವರಾಗಿದ್ದಾರೆ. ಧಾರ್ಮಿಕ ಸಂಘ ಸಂಸ್ಥೆಗಳಲ್ಲಿ ಶೇಕಡಾ 29.8 ಜನರು ಮಾತ್ರಾ ಸದಸ್ಯತ್ವವನ್ನು ಪಡೆದುಕೊಂಡಿದ್ದು, ಕೆಲವೊಂದು ದೇವಸ್ಥಾನ, ದೈವಸ್ಥಾನ, ಭಜನಾ ಮಂಡಳಿಗಳಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಕೆಲವೊಂದು ಐಚ್ಚಿಕ ಸಂಘಗಳಾದ ಗೆಳೆಯರ ಬಳಗ,ಕ್ರೀಡಾ ಸಂಘ,ಯುವಕ,ಯುವತಿ ಮಂಡಲಗಳು, ಜೆಸೀ, ರೋಟರೀ ಕೆಲವು ಕ್ಲಬ್ ಗಳು ಈ ರೀತಿಯ ಸಂಘಗಳಲ್ಲಿ ಶೇಕಡಾ 37.2 ಜನರು ಸದಸ್ಯರಾಗಿದ್ದು, ಪರವನ್ ಸಮುದಾಯವು ಅಭಿವೃದ್ಧಿಯ ಕಡೆ ಚಲಿಸುತ್ತಿದೆ ಎಂದು ಹೇಳಬಹುದು.

ರಾಜಕೀಯ ಕ್ಷೇತ್ರದಲ್ಲಿ ಪರವನ್ ಸಮುದಾಯದವರ ಪಾತ್ರ: ಪರವನ್ ಸಮುದಾಯದವರು ರಾಜಕೀಯ ಕ್ಷೇತ್ರದಲ್ಲಿ ತಮ್ಮ ಚಟುವಟಿಕೆ ಬಹಳ ಕಡಿಮೆ ಎಂದೇ ಹೇಳಬಹುದು. ಪರವನ್ ಸಮುದಾಯದವರು ಪರಿಶಿಷ್ಟ ಜಾತಿಗೆ ಸೇರಿರುವುದರಿಂದ ರಾಜಕೀಯ ಕ್ಷೇತ್ರದಲ್ಲಿ ಇವರಿಗೆ ಅವಕಾಶಗಳೇ ಸಿಗುತ್ತಿಲ್ಲವೆಂದು ಹೇಳಬಹುದು. ಕೇವಲ 3 ಶೇಕಡ ಜನರು ಗ್ರಾಮ ಪಂಚಾಯತಿಗಳಲ್ಲಿ ಸದಸ್ಯರಾಗಿದ್ದು ಅಧ್ಯಯನದಲ್ಲಿ ಬೆಳಕಿಗೆ ಬಂದಿದೆ. ಇದನ್ನು ಹೊರತು ಪಡಿಸಿ ಪರವನ್ ಸಮುದಾಯದವರು ರಾಜಕೀಯದಲ್ಲಿ ಯಾವುದೇ ಉನ್ನತ ಸ್ಥಾನ ಹೊಂದಿರುವುದು ಅಧ್ಯಯನದಲ್ಲಿ ಕಂಡು ಬಂದಿಲ್ಲ.

ಸಲಹೆಗಳು:

ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮೂಹದ ಜನರ ಅಭಿಪ್ರಾಯದಂತೆ ಗ್ರಾಮೀಣ ಸಮಾಜದಲ್ಲಿ ಅದರಲ್ಲೂ ಪ್ರತ್ಯಾಕವಾಗಿ ಜೀವಿಸುತ್ತಿರುವ ಸಮುದಾಯದ ಜನರು ಮತ್ತು ವಿದ್ಯಾವಂತ ಯುವ ಪೀಳೀಗೆಯ ಜನರು ಕೆಲವೊಂದು ಮೂಲ ಭೂತ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಅದರಲ್ಲೂ ವಿದ್ಯಾವಂತ ಯುವ ಪೀಳಿಗೆ ಜನರು ನಿರುದ್ಯೋಗ ಸಮಸ್ಯೆಯನ್ನು ಅತಿಯಾಗಿ ಎದುರುಸುತ್ತಿದ್ದಾರೆ, ಈ ಎಲ್ಲಾ ಸಮಸ್ಯೆಗಳು ಸಂಶೋಧನೆಯ ಸಂದರ್ಭದಲ್ಲಿ ಸಂಶೋಧಕನು ಕಂಡು ಬಂದಿದೆ, ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿ ಕೆಲವೊಂದು ಸಲಹೆ ಸೂಚನೆಗಳನ್ನು ಈ ಕೆಳಕಂಡ ರೀತಿಯಲ್ಲಿ ತಿಳಿಸಲಾಗಿದೆ.

1. ಸಮಾಜದ ಮುಖ್ಯವಾಹಿನಿಂದ ದೂರದಲ್ಲಿ ವಾಸವಾಗಿರುವ ಪರವನ್ ಸಮುದಾಯದ ಕುಟುಂಬಗಳನ್ನು ಪತ್ತೆ ಹಚ್ಚಿ ಅವುಗಳಿಗೆ ಅವಶ್ಯಕವಾಗಿರುವ ಮೂಲಭೂತ ಸವಲತ್ತುಗಳನ್ನು ಒದಗಿಸಿಕೊಡುವುದು.
2. ಶಿಕ್ಷಣ ಪಡೆದ ಸಮುದಾಯದ ಯುವಕ, ಯುವತಿಯರಿಗೆ ಅವರುಗಳ ಯೋಗ್ಯತೆಗೆ, ಆಸಕ್ತಿಗೆ ಸೂಕ್ತವಾದ ಉದ್ಯೋಗದ ಅವಕಾಶವನ್ನು ಒದಗಿಸಿಕೊಡುವುದು.

3. ಸರ್ಕಾರದಲ್ಲಿ ಲಭ್ಯವಿರುವ ಸವಲತ್ತುಗಳ, ಸೌಕರ್ಯಗಳ ಬಗ್ಗೆ ಸೂಕ್ತವಾದ ಮಾಹಿತಿಯನ್ನು ಒದಗಿಸಿಕೊಡುವಲ್ಲಿ ಸ್ಥಳೀಯ ಸರಕಾರಿ ಸಂಸ್ಥೆಗಳು ಮುತುವರ್ಜಿವಹಿಸುವುದು.
4. ಸಮುದಾಯದ ಮಹಿಳೆಯರಿಗೆ ಸ್ಥಳೀಯ ಮಟ್ಟದಲ್ಲಿ ಸೂಕ್ತವಾದ ಸ್ವಉದ್ಯೋಗದ ಭರವಸೆಯನ್ನು ಒದಗಿಸುವುದು.
5. ಸರಕಾರದಿಂದ ಸಿಗುವಂತಹ ಮೂಲಭೂತ ಸೌಕರ್ಯ, ವ್ಯವಸ್ಥೆಯನ್ನು ಸುಲಭವಾದ ರೀತಿಯಲ್ಲಿಸಮುದಾಯದ ಬಡ ಜನರಿಗೆ ಸಿಗುವಂತೆ ಮಾಡುವುದು.
6. ಕುಲ ಕಸುಬನ್ನು ಮುಂದುವರಿಸುತ್ತಿರುವ ಸಮುದಾಯದ ದೈವ ನರ್ತಕರಿಗೆ ಮಳೆಗಾಲದಲ್ಲಿ ಸೂಕ್ತವಾದ ಉದ್ಯೋಗದ ಭರವಸೆಯನ್ನು ಒದಗಿಸುವಂತದ್ದು.
7. ಸಮುದಾಯದ ದೈವ ನರ್ತಕರಿಗೆ ಸರಕಾರದ ವತಿಯಿಂದ ಪಿಂಚಣಿ ವ್ಯವಸ್ತೆಯನ್ನು ಪ್ರಾರಂಭ ಮಾಡುವುದು.
8. ಸಮುದಾಯವು ಎದುರುಸುತ್ತಿರುವಂತಹ ಅಸ್ಪೃಶ್ಯತೆ ಹಾಗೂ ಇದಕ್ಕೆ ಸಂಬಂಧ ಪಟ್ಟ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸರಕಾರ ಕಾನೂನು ಕ್ರಮಗಳನ್ನು ಜರುಗಿಸುವಂತದ್ದು.
9. ದೈವ ನರ್ತಕರ ಮಕ್ಕಳಿಗೆ ವಿಶೇಷ ಅನುದಾನವನ್ನು ನೀಡುವುದರೊಂದಿಗೆ ಅವರ ಮಕ್ಕಳ ಶಿಕ್ಷಣಕ್ಕೆ ಉತ್ತೇಜನವನ್ನು ನೀಡುವಂತದ್ದು.

ಉಪಸಂಹಾರ

ದಕ್ಷಿಣ ಕನ್ನಡ ಜಿಲ್ಲೆಯ ಪರವನ್ ಸಮುದಾಯದವರು ಮೂಲತಃ ದೈವನರ್ತಕರೆಂಬುದಾಗಿ ಚಿರಪರಿಚಿತರಾಗಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಜೀವನಾಡಿಯಾದಂತಹ ಭೂತಾರಾದನೆಯಲ್ಲಿ ಪರವನ್ ಸಮುದಾಯದವರು ಪ್ರಮುಖ ಪಾತ್ರ ವಹಿಸುತ್ತಾರೆ. ಇಂದಿಗೂ ಪರವನ್ ಸಮುದಾಯದ ಅದೆಷ್ಟೋ ಕುಟುಂಬಗಳು ದೈವನರ್ತಕರಾಗಿಯೇ ಜೀವನ ಸಾಗಿಸುತ್ತಿದ್ದು, ಆಧುನೀಕರಣದಿಂದ ಶಿಕ್ಷಣ ಪಡೆದಂತ ಯುವ ಪೀಳಿಗೆಯವರು ನಿರುದ್ಯೋಗದ ಸಮಸ್ಯೆಯನ್ನು ಎದುರಿಸಿದರೆ, ದೈವನರ್ತಕರು ನ್ಯಾಯಯುತವಾದ

ಆದಾಯವಿಲ್ಲದೆ, ಕೆಲಸವೂ ಇಲ್ಲದೆ ಬಡತನದಿಂದ ದಿನ ಕಳೆಯುತ್ತಿದ್ದಾರೆ. ಇವರು ಸಾಮಾಜಿಕವಾಗಿ ಪರಿಶಿಷ್ಟ ಜಾತಿ ಗುಂಪಿಗೆ ಸೇರಿರುವವರು ಆಗಿರುವುದರಿಂದ ಸಾಮಾಜಿಕವಾಗಿ ಸಮಾಜದಲ್ಲಿ ಮೇಲು ಜಾತಿಯವರ ಶೋಷಣೆ, ದಬ್ಬಾಳಿಕೆಗೆ ಗುರಿಯಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯು ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹೆಚ್ಚು ಅಭಿವೃದ್ಧಿಹೊಂದುತ್ತಿರುವ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದರೂ, ಪರವನ್ ಸಮುದಾಯದವರ ನಿರ್ಲಕ್ಷ್ಯದಿಂದಲೋ ಅಥವಾ ಇವರನ್ನು ಕಿತ್ತುತಿನ್ನುವ ಬಡತನದಿಂದಲೋ ಇನ್ನೂ ಕೂಡ ಇವರು ಸಾಮಾಜಿಕವಾಗಿ, ಆರ್ಥಿಕವಾಗಿ ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಕಂಡಿಲ್ಲ. ಬಹುತೇಕ ಪರವನ್ ಸಮುದಾಯದ ಜನರು ಕೂಲಿ ಕೆಲಸವನ್ನು ಮಾಡಿಕೊಂಡು ತಮ್ಮ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಬಡತನ, ನಿರುದ್ಯೋಗ, ಅಸ್ಪೃಶ್ಯತೆ ಮುಂತಾದ ಸಮಸ್ಯೆಗಳನ್ನು ಎದುರಿಸಿಕೊಂಡೆ ಜೀವನ ಮಾಡುತ್ತಿದ್ದಾರೆ.

ವಿಶೇಷವಾಗಿ ಪರವನ್ ಸಮುದಾಯದ ಕುಲಕಸುಬಾದ ದೈವನರ್ತನವನ್ನು ಮಾಡುತ್ತಿರುವ ಕಲಾವಿದರು ಸರಿಯಾದ ಮಟ್ಟದಲ್ಲಿ ಕೆಲಸ ಲಭ್ಯವಿಲ್ಲದೆ, ಕೆಲಸಕ್ಕೆ ತಕ್ಕ ಸಂಭಾವನೆ ದೊರೆಯದೆ ಇರುವುದು ಒಂದು ಕಾರಣವಾದರೆ, ಶಿಕ್ಷಣ ಪಡೆದ ಯುವಸಮುದಾಯ ದೈವ ನರ್ತನದಿಂದ ದೂರ ಉಳಿದು ಇತರ ಉದ್ಯೋಗದ ಕಡೆ ತಮ್ಮ ಒಲವನ್ನು ತೋರಿಸುತ್ತಿದ್ದಾರೆ. ದೈವರಾಧನೆಯು ವರ್ಷದ ಕೆಲವೇ ತಿಂಗಳುಗಳಲ್ಲಿ ಆಚರಣೆಂಬಲ್ಲಿರುವುದರಿಂದ ಅದನ್ನೇ ನಂಬಿಕೊಂಡಿರುವ ಪರವನ್ ಸಮುದಾಯದ ದೈವನರ್ತಕರು ಉಳಿದ ತಿಂಗಳುಗಳಲ್ಲಿ ಉದ್ಯೋಗವಿಲ್ಲದೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಜೊತೆಗೆ ದೈವನರ್ತಕರು ಶೈಕ್ಷಣಿಕವಾಗಿ ತುಂಬಾ ಹಿಂದುಳಿದಿರುವುದರಿಂದಾಗಿ ಇತರ ಉದ್ಯೋಗವನ್ನು ಮಾಡಲು ಅಸಹಾಯಕರಾಗಿ ಇರುತ್ತಾರೆ. ಇದೇ ಕಾರಣಕ್ಕಾಗಿ ಇಂದು ಪರವನ್ ಸಮುದಾಯದ ಯುವಜನತೆ ತಮ್ಮ ಮೂಲ ಕುಲಕಸುಬಾದ ದೈವನರ್ತನವನ್ನು ಬಿಟ್ಟು ಇತರ ಉದ್ಯೋಗದ ಕಡೆ ತಮ್ಮ ಗಮನ ಹರಿಸುತ್ತಿದ್ದಾರೆ.

ಇದರ ಜೊತೆಗೆ ತಾವು ಮಾಡುವ ಕಷ್ಟಕರ ಕೆಲಸ ಕಾರ್ಯಗಳು ಅಂದರೆ ದೈವ ನರ್ತನ, ಕೂಲಿ ಕೆಲಸ ಮುಂತಾದವುಗಳು ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುತ್ತವೆ. ಉದಾಹರಣೆಗೆ ದೈನರ್ತನ

ಮಾಡುವವರು ದೈವ ನರ್ತಕ ಆರಂಭವಾಗುವ ಒಂದೆರಡು ದಿನಗಳ ಹಿಂದಿನಿಂದ ಹಿಡಿದು ಅದು ಮುಗಿಯುವ ವರೆಗೆ ವೃತ್ತಾಚರಣೆಯಿಂದ ಹಿಡಿದು ರಾತ್ರಿಯಿಡೀ ನಿದ್ರೆ ಇಲ್ಲದೆ ಕುಣಿದು ಕುಪ್ಪಳಿಸುವುದು ಕಷ್ಟದ ಕೆಲಸವು ಆಗಿರುತ್ತದೆ. ಹಿರಿಯ ವಯಸ್ಸಿನ ದೈವನರ್ತಕರು ಕೆಲವು ಸಂದರ್ಭಗಳಲ್ಲಿ ವಾರಗಟ್ಟಲೆ ವಿಶ್ರಾಂತಿ ತೆಗೆದುಕೊಳ್ಳಬೇಕಾಗುತ್ತದೆ. ಇದರ ಪರಿಣಾಮ ಹಲವು ಜನ ಪರವನ್ ಸಮುದಾಯದ ದೈವ ನರ್ತಕರು ಬೆನ್ನು ನೋವು, ಸೊಂಟ ನೋವು ಮುಂತಾದ ಆರೋಗ್ಯ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಕೆಲವರು ತಮ್ಮ ಮಕ್ಕಳನ್ನು ಉತ್ತಮ ವಿದ್ಯಾವಂತರನ್ನಾಗಿಸುವ, ಉದ್ಯೋಗಸ್ಥರನ್ನಾಗಿಸುವ ಅಭಿಲಾಷೆಯನ್ನು ಇಟುಕೊಂಡಿರುವುದು ಅಧ್ಯಯನದಲ್ಲಿ ಬೆಳಕಿಗೆ ಬಂದಿದೆ. ಕೆಲವರು ತಮ್ಮ ಮಕ್ಕಳು ನಮ್ಮ ಹಾಗೆ ಕಷ್ಟಕರವಾದ ಕೆಲಸಗಳನ್ನು ಮಾಡಬಾರದು, ನಮ್ಮ ಹಾಗೆ ಅವಿದ್ಯಾವಂತರಾಗಿ ಇರಬಾರದು ಉತ್ತಮ ವಿದ್ಯೆಯನ್ನು ಪಡೆದು ಉತ್ತಮ ಉದ್ಯೋಗಗಳನ್ನು ಪಡೆಯಬೇಕು ಅದಕ್ಕಾಗಿ ನಾವು ಎಷ್ಟೇ ಕಷ್ಟ ಬಂದರು ಸಹಿಸಿಕೊಳ್ಳುತ್ತೇವೆ ಎಂಬುದಾಗಿ ತಮ್ಮ ಮನದಾಳದ ಮಾತನ್ನು ಹೇಳಿಕೊಂಡಿರುತ್ತಾರೆ. ಇದರ ಜೊತೆಗೆ ಸರ್ಕಾರದ ಸವಲತ್ತುಗಳು ಇದ್ದರೂ ಕೂಡ ಕೆಲವೊಂದು ಕುಟುಂಬಗಳಿಗೆ ಅವುಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಕೆಲವರು ಅವುಗಳು ಎಲ್ಲಿ ಸಿಗುತ್ತವೆ, ಅವುಗಳನ್ನು ಯಾವ ರೀತಿಯಲ್ಲಿ ಪಡೆಯಬೇಕು ಎಂಬ ಜ್ಞಾನ, ಅರ್ಿವು ಇಲ್ಲದಿರುವುದರಿಂದ ಅವುಗಳನ್ನು ಸದುಪಯೋಗ ಪಡೆಯುವಲ್ಲಿ ಸಫಲರಾಗಿಲ್ಲ. ಆದುದರಿಂದ ಕೆಲವರು ಹೇಳಿದ ಮಾತಿನ ಪ್ರಕಾರ ದೈವನರ್ತನ ಮಾಡುವ ನಮ್ಮ ಸಮುದಾಯಕ್ಕೆ ಪ್ರತ್ಯೇಕ ಸವಲತ್ತುಗಳನ್ನು ನೀಡಿದರೆ ನಾವು ಅದನ್ನು ಸಂಪೂರ್ಣವಾಗಿ ಉಪಯೋಗ ಪಡೆಯಬಹುದು ಎಂಬುದಾಗಿ ತಿಳಿಸಿರುತ್ತಾರೆ. ಅದೇ ರೀತಿ ದೈವರ್ತನ ಮಾಡುವವರಿಗೆ ಸರ್ಕಾರದಿಂದ ಪಿಂಚಣಿಯನ್ನು ನಿಗದಿ ಪಡಿಸಬೇಕು ಎಂಬುದಾಗಿ ಹೇಳಿಕೊಂಡಿರುತ್ತಾರೆ.

ಆಕಾರ ಗ್ರಂಥಗಳು

1. Anand, Bhaskar, Saletore. (1936). *Ancient Karnataka History of Tuluva*. Poona: Oriental Book Agency. Volume-1.
2. Bhat, P, Gururaja. (1969). *Antiquities of South-Kanara.* Manipal: Gitanjali Publications.
3. Bhat, P, Gururaja. (1975). *Studies in Tuluva History and Culture.*Manipal: Published by the Author.
4. Gowda, K, Chinnappa. (1998). *Bhutaradhane Ondu Adhyayana*. Mangalagangothri: Kannada Vibhaga, Mangalore University.
5. Gowda, K, Chinnappa. (2003). *Sanskrit Siri*. Mangalagangothri: Madipu Publications.
6. Gowda, K, Chinnappa. (2005). *The Mask and the Message.* Mangalagangothri: Madipu Prakashana
7. Darson, M, Richard. (1972). *Folklore and Folklife.* Chicago and London. The University of Chicago Press
8. Desilva, R, Willie. (1985). *From RTA to Dharma.* Kanara, India: Pragati Prakasan.
9. Editorial Committee. (1991). *Perspectives on Dakshina Kannada and Kodagu.* Mangalore University. Mangalagangothri: Mangalore University.
10. Fernandis, Denis. (2006).*The Tulu World in European Writings*, Department of History (unpublished these).

11. Kamath, U, Suryanath. (1977). *South Kanara Directory*. Mangalore: Mangala Publications.

12. Krishna, G,R. (1990).*Caste and Tribes of Fishermen.* New Delhi: Discovering Publishing House.

13. Kurup, K,K,N. (1977). *Aryan and Dravidian Elements in Malabar Folklore*. Trivandrum: Kerala Historical Society.

14. Malik, Suneila. (1979). *Social Integration of Scheduled Castes.* New Delhi: Abhianav Publications.

15. Madhava, K, G, Vasantha. (1985). *Religions in Costal Karnataka (1500-1763).*New Delhi: Inter- India Publications.

16. Mukunda, Prabhu, Shree, M. (2000). *Poli*. Mangalore: District Commissioner.

17. Navada, A, V, and Fernandis, D. (1894). *The Devil Worship of the Tuluvas.* Mangalore: Karnataka Tulu Sahitya Academy.

18. N, Bhat, Shyam. (1998). *South Kanara- A Study in Colonial Administration and Regional Response.* NewDelhi: Mithal Publications.

19. Nayak, H, M. and B, R, Gopal. (1990). *South- Indian Studies*. Mysore: Geetha Book House Publishers.

20. Pais, Richard. (2004).*Scheduled Caste- A Study in Employment and Social Mobility*. Mangalore: Mangala Publications.

21. Prasad, Nallur. (1998). *Janapada Karnataka.* Bangalore: Karnataka Janapada and Yakshagana Academy.

22. Ramakrishna, H,A. and Nage Gowda, H,L. (1998). *Essentials of Karnataka Folklore*. Bangalore: Karnataka Janapada Parishad.

23. Rao, B, Surendra, and Gowda, K, Chinnappa. (2003). *The Retrieved Acre- Nature and Culture in the World of Tuluva.* Mangalore University: Prasaranga.

24. Sankamar, Ameen, Ganesh. (2009). *Maya Mathu Joga*. Mangalore: Siri Prakashana Pavanje.